ವಿಜಯಪುರ | ಸಂಪುಟ 01 | ಸಂಚಿಕೆ 261 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಭಾನುವಾರ ಡಿಸೆಂಬರ್ 10, 2023

“ಪ್ರಾದೇಶಿಕ ಅಸಮಾನತೆ ತೊಡೆದುಹಾಕಲೆಂದು ವರ್ಷದಲ್ಲಿ 4 ಸಲ ಬೆಳಗಾವಿಯಲ್ಲಿ ಅಧಿವೇಶನ ನಡೆಸಲಾಗುತ್ತಿದೆ. ಆದರೆ ಇಂದಿಗೂ ಬೆಂಗಳೂರು ಶಕ್ತಿ ಕೇಂದ್ರವಾಗಿ, ಹಳೆಯ ಮೈಸೂರು ಭಾಗದ ಮಂತ್ರಿಗಳಿಗೇ ಪ್ರಮುಖ ಖಾತೆಗಳು ದೊರೆಯುತ್ತಿದ್ದು, ನಮ್ಮ ಮೇಲೆ ದಬ್ಬಾಳಿಕೆ ಮುಂದುವರೆದಿದೆ.



ಉದಯರಶ್ಮಿ ದಿನಪತ್ರಿಕೆ

–ಎಸ್.ವಿ.ಪಾಟೀಲ

ರಾಜಕೀಯ ಚಿಂತಕರು, ವಿಜಯಪುರ

ವಿಜಯಪುರ ಜಿಲ್ಲೆಯಲ್ಲಿ 13 ಪ್ರಕರಣಗಳ ದಾಖಲು | ಪ್ರಕರಣಗಳಲ್ಲಿ ಭಾಗಿಯಾಗಿರುವ ಬಾಂಡ್ ರೈಟರ್ಸ್ ಲೈಸೆನ್ಸ್ ರದ್ದಿಗೆ ಕ್ರಮ

# ಖೊಟ್ಟಿ ದಾಖಲೆ ಸೃಷ್ಠಿಸಿ ನೋಂದಣಿ :ಕಠಿಣ ಕ್ರಮ

## ಸಚಿವ ಎಂ.ಬಿ.ಪಾಟೀಲ ಖಡಕ್ ಸೂಚನೆ

ವಿಜಯಪುರ: ನಗರ ಸೇರಿದಂತೆ ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಠಿಸಿ ಆಸ್ತಿ ನೋಂದಣಿ ಮಾಡುವ ಪ್ರಕರಣಗಳು ಕಂಡು ಬಂದಿದ್ದು ಇಂತವರ ಮೇಲೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆ ಸಚಿವ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಅಧಿಕಾರಿಗಳಿಗೆ ಖಡಕ್ಕಾಗಿ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶನಿವಾರ ಸಭೆ ನಡೆಸಿ ಮಾತನಾಡಿದ ಅವರು, ಕೆಲವರು ಆಧಾರ ಕಾರ್ಡ್ ಮತ್ತು ಪ್ಯಾನ್ ಕಾರ್ಡ್ ಮೂಲಕ ಭೂ ಮಾಲೀಕರ ಹೆಸರಿನಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಠಿಸಿ ಆಸ್ತಿ ನೋಂದಣಿ ಮಾಡುತ್ತಿರುವ 13 ಪ್ರಕರಣಗಳನ್ನು ಈಗಾಗಲೇ ದಾಖಲಿಸಲಾಗಿದೆ. ಖೊಟ್ಟಿ ದಾಖಲೆ ಸೃಷ್ಟಿ ಮಾಡಿ, ಆಸ್ತಿಗಳನ್ನು ನೋಂದಣಿ ಮಾಡುವ ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿರುವ ಬಾಂಡ್ ರೈಟರ್ಸ್ ಗುರುತಿಸಿ, ಅವರ ಬಾಂಡ್ ರೈಟರ್ಸ್ ಲೈಸೆನ್ಸ್ ರದ್ದುಗೊಳಿಸವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಅದರಂತೆ ಸಬ್ ರಜಿಸ್ಟರ್ ಆಫೀಸನಲ್ಲಿ ಉಪ ನೋಂದಣಿ ಕಚೇರಿಯಲ್ಲಿ ಹೊರಗುತ್ತಿಗೆ ಆದಾರದ ಮೆಲೆ ಮೇಲೆ ಹಲವು ದಿನಗಳಿಂದ ಒಂದೇ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಜಿಲ್ಲಾ ವ್ಯಾಪ್ತಿಯಿಂದ ತಾಲೂಕು ಮಟ್ಟದಲ್ಲಿ ವರ್ಗಾವಣೆ ಮಾಡಿ, ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಕೆಲಸ ಮಾಡಲು ವರ್ಗಾವರ್ಗಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಕ್ರಮ ನೋಂದಣಿ ಪ್ರಕರಣಗಳು ಕಂಡು ಬಂದಲ್ಲಿ ಉಪ ನೋಂದಣಾಧಿಕಾರಿಗಳು ಜಿಲ್ಲಾ ನೋಂದಾಣಾಧಿಕಾರಿಗಳ ಅನುಮತಿ ಪಡೆದು ಸ್ಟೇಟ್ ಎಫ್ಐಆರ್ ಮಾಡಬೇಕು. ನೋಂದಣಿ ಮಾಡುವ ಸಂದರ್ಭದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಬ್ ರಜಿಸ್ಟರ್ ಅವರಿಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ವೋಟರ್ ಐಡಿ ಹಾಗೂ ರೇಶನ್ ಕಾರ್ಡ್ ಕೂಲಂಕೂಷವಾಗಿ ಪರಿಶೀಲಿಸಲು ಲಾಗಿನ್ ಐಡಿ ನೀಡಲಾಗುವುದು. ಮೂಲ ದಾಖಲೆಗಳನ್ನು ಪರಿಶೀಲಿಸಿ ನೋಂದಣಿ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ವಿಜಯಪುರ ಉಪ ವಿಭಾಗಾಧಿಕಾರಿ ಬಸಣೆಪ್ಪ ಕಲಶೆಟ್ಟಿ, ಮಹಾನಗರ ಪಾಲಿಕೆ ಆಯುಕ್ತ ಬದ್ರುದ್ದಿನ್ ಸೌದಾಗರ್, ವಿಜಯಪುರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ, ಜಿಲ್ಲಾ ನೋಂದಣಾಧಿಕಾರಿ ಜಿ.ಆರ್ ನಾಡಗೌಡ, ಉಪ ನೋಂದಣಾಧಿಕಾರಿ ಬಿ.ಎಸ್.ಬಿರಾದಾರ, ಮಲ್ಲಿಕಾರ್ಜುನ ಪಾಟೀಲ,ರವಿ ಹಂಚಿನಾಳ, ಐ. ಎಸ್.ಬಾಗಾಯತ್, ದೇವಪ್ಪ ಡಂಬಳ ಸೇರಿದಂತೆ ವಿವಿಧ ತಾಲೂಕಿನ ತಹಶೀಲ್ದಾರರು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನೋಂದಣಿ ಮಾಡುವ ಸಂದರ್ಭದಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳು ದಾಖಲೆಗಳನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ತಮ್ಮ ಹೆಸರು ಹಾಗೂ ಹುದ್ದೆಯನ್ನು ಕಡ್ಡಾಯವಾಗಿ ನಮೂದಿಸಬೇಕು.

ಜಿಲ್ಲೆಯಾದ್ಯಂತ ಅಕ್ರಮವಾಗಿ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿ ಮಾರಾಟ ಮಾಡುವುದನ್ನು ತಡೆಗಟ್ಟಲು ತಹಶೀಲ್ದಾರರನ್ನು ನೋಡಲ್ ಅಧಿಕಾರಿಗಳನ್ನಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಂದ ಓರ್ವ ಅಧಿಕಾರಿಯನ್ನು ನೇಮಕ ಮಾಡಿಕೊಳ್ಳಲು ತಿಳಿಸಿದರು.

ಇಂತಹ ಪ್ರಕರಣಗಳಲ್ಲಿ ಮೋಸ ಹೋಗಿರುವ ಸಾರ್ವಜನಿಕರು ನೋಡಲ್ ಅಧಿಕಾರಿಗಳಿಗೆ ದೂರು ಸಲ್ಲಿಸಲು ಅನುಕೂಲವಾಗುವಂತೆ ನಿರ್ಣಯ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಮಹಾನಗರ ಪಾಲಿಕೆ ಕಚೇರಿಯಲ್ಲಿ ನೊಂದಣಿ ಮಾಡಿಕೊಳ್ಳುವ ಸಂದರ್ಭದಲ್ಲಿ ಅಲ್ಲಿಯೂ ಸಹ ವೋಟರ್ ಐಡಿ ರೇಶನ್ ಕಾರ್ಡ್ ಕಡ್ಡಾಯವಾಗಿ ಪರಿಶೀಲನೆ ಮಾಡಬೇಕು. ಇಂದಿನ ಸಭೆಯ ಸಮಗ್ರವಾದ ನಡಾವಳಿಯ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿ ಮಾರ್ಗದರ್ಶನ ಕೋರಲು ಸಚಿವ ಎಂ.ಬಿ ಪಾಟೀಲ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.



ತಿಕೋಟಾ, ಬಬಲೇಶ್ವರ, ತಾಳಿಕೋಟಿ ತಾಲೂಕುಗಳಲ್ಲಿ ಸಬ್ ರಜಿಸ್ಟರ್ ಕಚೇರಿಗೆ ಮಂಜೂರಾಗಿದ್ದು, ಈ ಕಚೇರಿಯಲ್ಲಿ ಖಾಲಿ ಹುದ್ದೆಗಳಿಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

### ರಾಜ ನುಡಿ

ನೀವು ಬಿದ್ದ ಸ್ಥಳಕ್ಕೆ ಮರಳಿ ಹೋಗುವುದರಿಂದ ನಿಮ್ಮ ಗಾಯ ಮಾಯುವುದಿಲ್ಲ. ಆ ಜಾಗದಿಂದ ದೂರ (ಆಸ್ಪತ್ರೆಗೆ) ಹೋಗುವುದರಿಂದ ಮಾಯಬಹುದು. ಮೈ ಅಥವಾ ಮನದ ಗಾಯ ಮಾಯಲು ಬಿದ್ದ ಸ್ಥಳದಿಂದ ಅಥವಾ ಬೀಳಿಸಿದವರಿಂದ ದೂರ ಸರಿಯುವುದು ಉತ್ತಮ್ಮ..

–ಡಾ. ರಾಜಶೇಖರ ನಾಗೂರ

# ಕಲಕೇರಿ ಹೋಬಳಿ ಘೋಷಣೆಗಾಗಿ ಸೋಮವಾರ ಬಂದ್‌ಗೆ ಕರೆ

ಉದಯರಶ್ಮಿ ನ್ಯೂಸ್

ಕಲಕೇರಿ: ಸುಮಾರು 20 ಸಾವಿರ ಜನಸಂಖ್ಯೆ ಹೊಂದಿ, ಒಂದು ತಾಲೂಕಿಗೆ ಬೇಕಾಗುವ ಎಲ್ಲಾ ಅರ್ಹತೆಗಳು ಇದ್ದಾಗ್ಯೂ ಕೂಡಾ ಇಲ್ಲಿಯವರೆಗೆ ಹೋಬಳಿಯೂ ಆಗದಿರುವುದು ಈ ಭಾಗದ ಜನಪ್ರತಿನಿಧಿಗಳ ಹಾಗೂ ಅಧಿಕಾರಗಳ ನಿರ್ಲಕ್ಷ್ಯವೇ ಮುಖ್ಯ ಕಾರಣ ಎಂದು ಭೋವಿ ಸಮಾಜದ ಮುಖಂಡರಾದ ಹಣಮಂತ ಹೋರಾಟ ಮಾತನಾಡಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಎಲ್ಲಾ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಕಲಕೇರಿ ಹೋಬಳಿ ಹೋರಾಟದ ಸಲುವಾಗಿ ಕರೆದ ಪೂರ್ವಬಾವಿ ಸಭೆಯಲ್ಲಿ ಅವರು ಮಾತನಾಡಿದರು.


ಈ ಸಂದರ್ಭದಲ್ಲಿ ಸೋಮವಾರದಂದು ಕಲಕೇರಿ ಬಂದ್‌ಗೆ ಕರೆ ನೀಡಿ ಮುಂದಿನ ಹೋರಾಟದ ಕುರಿತು ಚರ್ಚೆ ಮಾಡಲಾಯಿತು.

ಮಾಜಿ.ತಾ.ಪಂ ಸದಸ್ಯ ಲಕ್ಕಪ್ಪ ಬಡಿಗೇರ ಮಾತನಾಡಿ, ಹಿಂದಿನ ಬಿ.ಜೆ.ಪಿ ಸರಕಾರದ ಶಾಸಕರಿಗೆ ಅನೇಕ ಭಾರಿ ಮನವಿ ಮಾಡಿದಾಗ್ಯೂ ಖಂಡಿತವಾಗಿಯೂ ಕಲಕೇರಿ ಹೋಬಳಿ ಮಾಡುತ್ತೇವೆ ಎನ್ನುವ ಭರವಸೆ ನೀಡಿದ್ದರು, ಆದರೆ ಅವರು ತಮ್ಮ ಅಧಿಕಾರ ಅವದಿಯಲ್ಲಿ ಮಾಡಲಿಲ್ಲ, ಆದ್ದರಿಂದ ಈಗಿರುವ ಶಾಸಕರು ವಿಶೇಷ ಕಾಳಜಿ ವಹಿಸಿ ಸರಕಾರದ ಗಮನಕ್ಕೆ ತಂದು ಕಲಕೇರಿ ಹೋಬಳಿ ಘೋಷಣೆ ಮಾಡುವಂತೆ ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಗ್ರಾ.ಪಂ ಅಧ್ಯಕ್ಷ ರಾಜ ಅಹಮ್ಮದ ಸಿರಸಗಿ, ಸುಧಾಕರ ಅಡಕಿ, ನಬಿಲಾಲ್ ನಾಯ್ಕೋಡಿ, ಎಂ.ಪಿ.ನದಾಫ, ಕಲಕೇರಿ ಹೋಬಳಿ ಆದರೆ ಕಲಕೇರಿ ಸೇರಿದಂತೆ ಸುತ್ತಮುತ್ತಲಿನ ಸುಮಾರು 50 ಹಳ್ಳಿಗಳಿಗೆ ಇಷ್ಟೇಲ್ಲಾ ಅನುಕೂಲ ಆಗುವುದು ಎಂದು ಹೇಳಿದರು



ಈ ಸಂದರ್ಭದಲ್ಲಿ ಮುಖಂಡರಾದ ದೇವಿಂದ್ರ ಜಂಬಗಿ, ಪರಶುರಾಮ ಕುದರಕಾರ, ಅನೀಲ ಬಡಿಗೇರ, ಪರಶುರಾಮ ಬೇಡರ, ರಮೇಶ ಹೆಂಡಿ, ಕಾಸೀಂ ನಾಯ್ಕೋಡಿ, ಚಂದ್ರಕಾಂತ ಬಡಿಗೇರ, ಲಾಳೇಮಶಾಕ ನಾಯ್ಕೋಡಿ, ಶರಣು ಕವದಿ, ಸುನೀಲ ಪಾಟೀಲ, ಹಸನ ನಾಗಾವಿ, ಪ್ರಕಾಶ ಯರನಾಳ, ಪ್ರಕಾಶ ಗುಮಶೆಟ್ಟಿ, ಯಮನೂರಿ ಸಿಂದಗೀರಿ, ಈರಗಂಘಿ ಬಡಿಗೇರ, ಚಾಂದ ಪಾಷಾ ಹವಾಲ್ದಾರ, ಮಹಮ್ಮದ ಕೆಂಬಾವಿ, ವಿಶ್ವನಾಥ ರಾಠೋಡ, ಶಿವರಾಯ ಮೋಪಗಾರ, ದಾವಲಸಾಬ್ ಬನಹಟ್ಟಿ, ಬಿ.ಎಲ್ ಕಾಚಪುರ, ಎಸ್.ಎಂ.ಬಿರಾದಾರ, ಸಲೀಂ ನಾಯ್ಕೋಡಿ, ಮೇಹಬೂಬ ಮೋಲಿನಮನಿ, ಹಾಜಿಪಾಶಾ ಜಾಗೀರದಾರ, ಮಹದೇವ ಲಿಂಗದಳ್ಳಿ, ವಿನೋದ ಛಲವಾದಿ, ದವಲ ನಾಯ್ಕೋಡಿ ಇತರರು ಉಪಸ್ಥಿತರಿದ್ದರು.



### ವಚನ ಚಿಂತನ 251

*ಎನ್ನೊಳಗೆ ತನ್ನ ತೋರಿದ ಮಹಾಗುರು*

*ಎನ್ನ ಕರಸ್ಥಲದ ಮಧ್ಯದಲ್ಲಿ ಪರಮನಿರಂಜನದ ಅರುಹು ತೋರಿದ,*
*ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ*
*ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೊರಿದ*
*ಆ ಬೆಳಗಿನ ನಿಲುವಿನೊಳಗೆ ಎನ್ನ ತೋರಿದ,*
*ಎನ್ನೊಳಗೆ ತನ್ನ ತೋರಿದ, ತನ್ನೊಳಗೆ ಎನ್ನನಿಂಬಿಟ್ಟುಕೊಂಡ,*
*ಮಹಾಗುರುವಿಗೆ ನಮೋ ನಮಃ ಎನುತಿರ್ದೆನಯ್ಯಾ ಅಖಂಡೇಶ್ವರಾ.*
*– ಷಣ್ಮುಖಸ್ವಾಮಿಗಳು*

12ನೇ ಶತಮಾನದ ಬಸವಾದಿ ಸಮಕಾಲಿನ ಶರಣರು ತೋರಿಸಿದ ಲಿಂಗ ಪೂಜಾಫಲವನ್ನು 16ನೇ ಶತಮಾನದ ಷಣ್ಮುಖಸ್ವಾಮಿಗಳು ಸಹ ಅನುಭಾವಿಸಿದ ಬಗ್ಗೆ ಮೇಲಿನ ವಚನದಲ್ಲಿ ವಿವರಿಸಿದ್ದಾರೆ, ಅವರು ಹೇಳುವಂತೆ ಲಿಂಗದಲ್ಲಿ ಮಹಾಜ್ಞಾನದ ಬೆಳಗು ಕಂಡಿದ್ದಾರೆ,(ಎನ್ನ ಕರಸ್ಥಲದ ಮದ್ಯದಲ್ಲಿ ಪರಮನಿರಂಜನದ ಅರುಹು ತೋರಿದ, ಆ ಕುರುಹಿನ ಮದ್ಯದಲ್ಲಿ ಅರುಹಿನ ಕಳೆಯ ತೋರಿದ ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೊರಿದ ಆ ಬೆಳಗಿನ ನಿಲುವಿನೊಳಗೆ ಎನ್ನ ತೋರಿದ,) ಆ ಬೆಳಗಿನಲ್ಲಿ ತಮ್ಮನ್ನು ತಾವು ಕಂಡುಕೊಳ್ಳುತ್ತಾ ಆ ತಮ್ಮೊಳಗೆ ಪರಮಚೈತನ್ಯವನ್ನು ಕಂಡ ಬಗ್ಗೆ ತಿಳಿಸಿದ್ದಾರೆ. ಅಂದರೆ ಲಿಂಗದ ಮೂಲಕ ಬ್ರಹ್ಮಾಂಡದ ಹಾಗೂ ತಮ್ಮೊಳಗೆ ಅಡಗಿರುವ ಪಿಂಡಾಂಡದ ಚೈತನ್ಯವನ್ನು ಕಾಣಬಹುದು ಎನ್ನುತ್ತ ಈ ಸುಲಭ ವಿಧಾನವನ್ನು ಅರುಹಿದ ಮಹಾಗುರು ಬಸವಣ್ಣನವರಿಗೆ ನಮನ ಸಲ್ಲಿಸಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

ರಾಜ್ಯ 38ನೇ ರೇಡಿಯಾಲಜಿ– ಐಆರ್‌ಐಎ ಸಮ್ಮೇಳನ ಉದ್ಘಾಟಿಸಿ ಸಚಿವ ಎಂ.ಬಿ.ಪಾಟೀಲ ಭರವಸೆ

# ರೇಡಿಯಾಲಾಜಿಸ್ಟ್‌ಗಳ ಸಮಸ್ಯೆಗಳಿಗೆ ಸೂಕ್ತ ಪರಿಹಾರ

ಉದಯರಶ್ಮಿ ನ್ಯೂಸ್

ವಿಜಯಪುರ: ರೇಡಿಯಾಲಾಜಿಸ್ಟ್‌ಗಳ ಸಮಸ್ಯೆಗಳ ಕುರಿತು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ, ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಭರವಸೆ ನೀಡಿದ್ದಾರೆ.

ನಗರದ ಬಿ. ಎಲ್. ಡಿ. ವೈದ್ಯಕೀಯ ಕಾಲೇಜಿನ ಗ್ರಂಥಾಲಯ ಸಭಾಂಗಣದಲ್ಲಿ ನಡೆದ ರಾಜ್ಯ 38ನೇ ರೇಡಿಯಾಲಜಿ– ಐ ಆರ್ ಐ ಎ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ರೇಡಿಯಾಲಾಜಿಸ್ಟ್ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಈ ಸಂಘಟನೆಯವರು ಮಾಡಿರುವ ಮನವಿಯ ಕುರಿತು ಆರೋಗ್ಯ ಮತ್ತು ವೈದ್ಯಕೀಯ ಸಚಿವರೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ಸಚಿವರು ತಿಳಿಸಿದರು.

ಜನರಿಗೆ ಕೈಗೆಟಕುವಂತೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ವೈದ್ಯರ ಸತತವಾಗಿ ನಡೆಸುತ್ತಿರುವ ಪ್ರಯತ್ನ ಗಮನಾರ್ಹವಾಗಿದೆ. ರೇಡಿಯಾಲಜಿ ವೈದ್ಯಕೀಯ ಕ್ಷೇತ್ರದ ಅವಿಭಾಜ್ಯ ಅಂಗವಾಗಿದೆ. ಇಂಟರವೆನ್ಶನಲ್ ರೇಡಿಯಾಲಜಿ ಶಸ್ತಚಿಕಿತ್ಸೆಗಳಲ್ಲಿ ಕ್ರಾಂತಿಕಾರಿ ತಂದಿದೆ. ಈ ಕ್ಷೇತ್ರದ



ಸಾಧಿಸಲಾಗುತ್ತಿರುವ ಪ್ರಗತಿಯಿಂದಾಗಿ ರೋಗಗಳನ್ನು ಆರಂಭದಲ್ಲಿಯೇ ಪತ್ತೆ ಮಾಡಲು ಮತ್ತು ಈ ಮೂಲಕ ಶಸ್ತ್ರಚಿಕಿತ್ಸೆಗಳ ಅವಧಿ ಮತ್ತು ರೋಗಿ ಎದುರಿಸುವ ನೋವಿನ ಪ್ರಮಾಣವನ್ನು ಕಡಿಮೆ ಮಾಡಲು ಸಹಕಾರಿಯಾಗಿದೆ. ಜೊತೆಗೆ, ರೋಗಿಗಳು ಆಸ್ಪತ್ರೆಯಲ್ಲಿರಬೇಕಾದ ಅವಧಿ ಹಾಗೂ ಶಸ್ತಚಿಕಿತ್ಸಾ ವೆಚ್ಚವೂ ಗಣನೀಯವಾಗಿ ಕಡಿಮೆಯಾಗುತ್ತಿದೆ. ಈಗ ಹೊಸದಾಗಿ ಬಂದಿರುವ ಕೃತಕ ಬುದ್ಧಿಮತ್ತೆಯಿಂದ ರೇಡಿಯಾಲಜಿ ಕ್ಷೇತ್ರದಲ್ಲಿ ಮತ್ತಷ್ಟು ಪ್ರಗತಿಯಾಗಲಿದೆ. ಇದರ ಜೊತೆಗೆ ಮಾನವೀಯ ಮೌಲ್ಯಗಳನ್ನು ಹೊಂದಿರುವ ತಿಕಿತ್ಸೆ ಎಲ್ಲರಿಗೂ ಅನುಕೂಲ ಕಲ್ಪಿಸುವುದು ಕೂಡ ಅಗತ್ಯವಾಗಿದೆ ಎಂದು ಅವರು ಹೇಳಿದರು.

ವೈದ್ಯಕೀಯ ಸಲಕರಣೆ ಉದ್ಯಮ ಸ್ಥಾಪನೆಗೆ ಸಕಲ ನೆರವು

ಇದೇ ವೇಳೆ, ರಾಜ್ಯದಲ್ಲಿ ವೈದ್ಯಕೀಯ ಸಲಕರಣೆ ತಯಾರಿಕೆ ಘಟಕ ಸ್ಥಾಪಿಸಲು ಮುಂದಾಗುವ ಉದ್ಯಮಿಗಳಿಗೆ ರಾಜ್ಯ ಸರಕಾರ ಸಕಲ ಮೂಲಭೂತ ಸೌಲಭ್ಯ ಒದಗಿಸಿ ಸಂಪೂರ್ಣ ಸಹಕಾರ ನೀಡಲಿದೆ. ವಿಜಯಪುರ ಜಿಲ್ಲೆಯಲ್ಲಿ ಜಲಸಂಪನ್ಮೂಲ ಹೇರಳವಾಗಿದ್ದು, ಮುಂಬರುವ ದಿನಗಳಲ್ಲಿ ಕೈಗಾರಿಕೆಗಳಿಗೂ ಹೆಚ್ಚು ಅನುಕೂಲ ಸಿಗಲಿದೆ. ಆರೋಗ್ಯ ಕ್ಷೇತ್ರದಲ್ಲಿ ರೆಡಿಯೋಥೆರಪಿ ಮಹತ್ವದ್ದಾಗಿದ್ದು, ಈ ಸಮ್ಮೇಳನದಲ್ಲಿ 500 ವೈದ್ಯಕೀಯ ಪ್ರತಿನಿಧಿಗಳು ಪಾಲ್ಗೊಂಡು 400 ಸಂಶೋಧನೆಗಳನ್ನು ಮಂಡಿಸುತ್ತಿರುವುದು ರೇಡಿಯಾಲಜಿ ಕ್ಷೇತ್ರದ ಜನಪ್ರೀಯತೆಯನ್ನು ತೋರಿಸುತ್ತದೆ ಎಂದು ಅವರು ಹೇಳಿದರು.

ವಿಜಯಪುರದಲ್ಲಿ ಮೂರ್ನಾಲ್ಕು ತಿಂಗಳಲ್ಲಿ ವಿಮಾನ ಸಂಚಾರ ಪ್ರಾರಂಭವಾಗಲಿದೆ, ಇದರಿಂದ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ಸಿಗಲಿದೆ. ಇದರಿಂದ ಈ ಭಾಗದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗೂ ನೆರವಾಗಲಿದೆ ಎಂದು ಸಚಿವ ಎಂ. ಬಿ. ಪಾಟೀಲ ತಿಳಿಸಿದರು.

ಐ ಆರ್ ಐ ಎ ರಾಜ್ಯಾಧ್ಯಕ್ಷ ಡಾ. ಪಿ. ಬಾಲಕೃಷ್ಣ ಶೆಟ್ಟಿ ಮಾತನಾಡಿ, ಈ ಬಾರಿಯ ಸಮ್ಮೇಳದಲ್ಲಿ ಅತೀ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿರುವುದು ಸಮ್ಮೇಳನದ ಯಶಸ್ಸಿಗೆ ಸಾಕ್ಷಿಯಾಗಿದೆ. ಈ ಭಾಗದದಲ್ಲಿ ಸಚಿವ ಎಂ. ಬಿ. ಪಾಟೀಲ ಅವರು ಮಾಡಿರುವ ನೀರಾವರಿ ಕೆಲಸಗಳು ಅಭಿವೃದ್ಧಿಯನ್ನು ಸಾರಿ ಹೇಳುತ್ತಿವೆ ಎಂದು ಹೇಳಿದರು. ಅಲ್ಲದೇ, ರೇಡಿಯಾಲಾಜಿಸ್ಟ್ ಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸುವಂತೆ ಸಚಿವರಲ್ಲಿ ಮನವಿ ಮಾಡಿದರು.

ಐ ಆರ್ ಎ ಐ ರಾಷ್ಟ್ರೀಯ ಅಧ್ಯಕ್ಷ ಡಾ. ಉಮೇಶ ಕೃಷ್ಣಮೂರ್ತಿ ಮಾತನಾಡಿ, ರೆಡಿಯಾಲಜಿ ಕ್ಷೇತ್ರದಲ್ಲಿ ಭಾರತಕ್ಕೆ ವಿಶ್ವಮಾನ್ಯತೆ ಸಿಗುತ್ತಿದ್ದು, ದೇಶದ ರೇಡಿಯಾಲಜಿಸ್ಟ್ ಗಳು ಈಗ ವಿಶ್ವಾದ್ಯಂತ ಗಮನ ಸೆಳೆಯುತ್ತಿದ್ದಾರೆ. ವಿದೇಶಿ ವೈದ್ಯಕೀಯ ಸಂಸ್ಥೆಗಳು ನಮ್ಮೊಂದಿಗೆ ಒಡಂಬಡಿಕೆಗೆ ಮುಂದಾಗುತ್ತಿವೆ ಎಂದು ಹೇಳಿದರು.

ಅಷ್ಟೇ ಅಲ್ಲ, ಐ ಆರ್ ಎ ಐ ಕಾರ್ಯಾಗಾರ ಮತ್ತು ತರಬೇತಿ ಶಿಬಿರಗಳನ್ನು ಆಯೋಜಿಸುವ ಮೂಲಕ ರೇಡಿಯಾಲಾಜಿ ಸ್ನಾತಕೋತ್ತರ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ ಹೆಚ್ಚು ಒತ್ತು ನೀಡುತ್ತಿದೆ. ಭಾರತದಲ್ಲಿ ಇದೇ ಮೊದಲ ಬಾರಿಗೆ ಭಾರತದ 800 ರೆಡಿಯಾಜಿಸ್ಟ್ ತಜ್ಞರು ರಚಿಸಿರುವ ಆರೋಗ್ಯ ಸಂಬಂಧಿ ಲೇಖನಗಳನ್ನು 6 ಸಂಪುಟಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿದೆ ಅಲ್ಲದೇ, ಮಹಿಳೆಯರ ಸಬಲೀಕರಣಕ್ಕಾಗಿ ದೇಶದಲ್ಲಿ ಇದೇ ಮೊದಲ ಬಾರಿಗೆ ಮಹಿಳಾ ವಿಭಾಗ ಪ್ರಾರಂಭಿಸಿ ಮಹಿಳೆಯರನ್ನೇ ಅಧ್ಯಕ್ಷರನ್ನಾಗಿ ಮಾಡಲಾಗಿದೆ ಎಂದು ತಿಳಿಸಿದರು.

ಬಿ. ಎಲ್. ಡಿ. ಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ. ಆರ್. ಎಸ್. ಮುಧೋಳ ಮಾತನಾಡಿ, ಡಾ. ಎಂ. ಬಿ. ಪಾಟೀಲ ಮಾರ್ಗದರ್ಶನದಲ್ಲಿ ವಿವಿ ಅತ್ಯುತ್ತಮ ಕೆಲಸ ಮಾಡುತ್ತಿದೆ. ವೈದ್ಯಕೀಯ ಕ್ಷೇತ್ರಕ್ಕೆ ಅಗತ್ಯವಾಗಿರುವ ಎಲ್ಲ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ವೈದ್ಯ ವಿದ್ಯಾರ್ಥಿಗಳಿಗೆ ಜಗತ್ತಿನ ಹೊಸ ಹೊಸ ತಂತ್ರಜ್ಞಾನಗಳ ತರಬೇತಿ ನೀಡಲಾಗುತ್ತಿದೆ. ಮಾನವೀಯ ಕಳಕಳಿ ಹೊಂದಿರುವ ಮೌಲ್ಯಗಳನ್ನು ಹೇಳಿಕೊಡುವ ಮೂಲಕ ಯುವ ವೈದ್ಯರಿಗೆ ರೋಗಿಗಳೊಂದಿಗೆ ಉತ್ತಮ ಸಂವಹನ ನಡೆಸಲು ಅನುಕೂಲ ಮಾಡಿಕೊಡಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮ್ಮೇಳನದ ಅಂಗವಾಗಿ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಡಾ. ರಂಗನಾಥ ಮತ್ತು ಡಾ. ಎಂ. ಎಂ. ಪಾಟೀಲ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಲ್ಲದೇ, ಡಾ. ಎಸ್. ಕೆ. ಜೋಶಿ, ಡಾ. ಎಚ್. ಟಿ. ನಾರಾಯಣ, ಡಾ. ಶ್ರೀನಿವಾಸ ಬಾಬು, ಡಾ. ಇಂದುಶೇಖರ, ಡಾ. ಗಣೇಶ, ಡಾ. ಪಿ. ಬಿ. ಶೆಟ್ಟಿ ಅವರಿಗೆ ಗುರುವಂದನೆ ಸಲ್ಲಿಸಲಾಯಿತು. ಜೊತೆಗೆ ಕೆಎಂಸಿ ವೀಕ್ಷಕ ಡಾ. ಕೃಷ್ಣಪ್ಪ ಅವರಿಗೆ ಸನ್ಮಾನ ಮಾಡಲಾಯಿತು. ಡಾ. ಸಂತೋಷ ಕುಲಗೋಡ ಅವರಿಗೆ ಎಂಟರಪೇರನರ್ ರೇಡಿಯಾಲಾಜಿಸ್ಟ್ ಹಾಗೂ ಡಾ. ಮಲ್ಲಿಕಾರ್ಜುನ ಅವರಿಗೆ ಬಡ್ಡಿಂಗ್ ಎಂಟರಪೇರನರ್ ರೇಡಿಯಾಲಾಜಿಸ್ಟ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಲ್ಲದೇ, ಡಾ. ಉಮೇಶ ಕೃಷ್ಣಮೂರ್ತಿ, ಡಾ. ಪ್ರವೀಣ ಹಾಗೂ ಡಾ. ಮಹೇಶ ಬನ್ನೂರ ಅವರಿಗೆ ಪ್ರಶಂಸಾ ಪತ್ರ ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಬಿ.ಎಲ್.ಡಿ.ಇ ವಿವಿಯ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಐ ಆರ್ ಎ ಐ ರಾಜ್ಯ ಕಾರ್ಯದರ್ಶಿ ಡಾ. ರವಿ ಎನ್. ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಡಾ. ಪ್ರವೀಣ ಜಿ. ಯು, ನೂತನ ಅಧ್ಯಕ್ಷ ಡಾ. ಸಂಪಂಗಿರಾಮಯ್ಯ, ಡಾ. ಬಾಲಕೃಷ್ಣಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮ ಸಂಘಟನಾ ಅಧ್ಯಕ್ಷ ಡಾ. ರಾಜಶೇಖ ಮುಚ್ಚಂಡಿ ಪ್ರಾಸ್ತವಿಕವಾಗಿ ಮಾತನಾಡಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಡಾ. ಶಿವಾನಂದ ಪಾಟೀಲ ವಂದಿಸಿದರು.

### ಶೈಕ್ಷಣಿಕ ಚಿಂತನಾಗೋಷ್ಠಿ ಹಾಗೂ ಆದರ್ಶ ಶಿಕ್ಷಕ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿದ ಸಚಿವ ಎಂ.ಬಿ.ಪಾಟೀಲ ಅಭಿಮತ

# ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹಿರಿದು

**ಉದಯರಶ್ಮಿ ನ್ಯೂಸ್**



ವಿಜಯಪುರ: ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದಲಾಗುತ್ತಿರುವ ವಿದ್ಯಮಾನಗಳಿಗೆ ತಕ್ಕಂತೆ ಶಿಕ್ಷಕರು ನಿರಂತರ ಜ್ಞಾನಾರ್ಜನೆ ಮಾಡುತ್ತ ಆದರ್ಶ ಶಿಕ್ಷಕರಾಗಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ನಗರದ ಕಂದಗಲ ಹನಮಂತರಾಯ ರಂಗಮಂದಿರದಲ್ಲಿ ಆದರ್ಶ ಶಿಕ್ಷಕರ ವೇದಿಕೆ ಮತ್ತು ಜಿಲ್ಲಾ ಯುವ ಪರಿಷತ್ ವತಿಯಿಂದ ಆಯೋಜಿಸಲಾಗಿದ್ದ ನಡೆದ ಶೈಕ್ಷಣಿಕ ಚಿಂತನಾಗೋಷ್ಠಿ ಹಾಗೂ ಆದರ್ಶ ಶಿಕ್ಷಕ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ದೇಶ ಮತ್ತು ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಶ್ಲಾಘನೀಯವಾಗಿದೆ. ಶಿಕ್ಷಕರು ಆದರ್ಶರಾಗಿರಬೇಕು. ಇದರಿಂದ ಸ್ಪೂರ್ತಿ ಪಡೆದ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಕನಸುಗಳನ್ನು ನನಸು ಮಾಡಲು ಶ್ರಮಿಸುತ್ತಾರೆ. ನಮ್ಮ ಅಜ್ಜ ತಿಕೋಟಾದ ಎ. ಟಿ. ಪಾಟೀಲರು ರಾಷ್ಟ್ರ ಮಟ್ಟದಲ್ಲಿ ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದಿದ್ದರು. ಅಲ್ಲದೇ, ತರಗತಿಗಳಿಗೆ ಗೈರು ಹಾಜರಾದ ತಮ್ಮ ಸ್ವಂತ ಮಗನನ್ನೇ ಒಂದು ವರ್ಷ ಫೇಲ್ ಮಾಡಿ ಆದರ್ಶ ಶಿಕ್ಷಕರಾಗಿ ಕೆಲಸ ಮಾಡಿದ್ದರು. ಶಿಕ್ಷಕರ ಆದರ್ಶಗಳು ಇತರರಿಗೆ ಪ್ರೇರಣೆಯಾಗಬೇಕು. ಪ್ರತಿಯೊಂದು ಗ್ರಾಮಗಳಲ್ಲಿ ಪ್ರತಿಭೆಗಳಿವೆ. ಗ್ರಾಮೀಣ ಮಕ್ಕಳಿಗೆ ಪ್ರೋತ್ಸಾಹ ಸಿಕ್ಕರೆ ಅವರು ಕಾನ್ವೆಂಟ್ ಮಕ್ಕಳಿಗಿಂತಲೂ ಹೆಚ್ಚು ಸಾಧನೆ ಮಾಡುತ್ತಾರೆ. ನಮ್ಮ ಕಾಲದಲ್ಲಿ ಸರಕಾರಿ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ತಮ್ಮ ಕಠಿಣ ಶ್ರಮದಿಂದ ಈಗ ವಿದೇಶಗಳಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಮಕ್ಕಳಲ್ಲಿ ಕೀಳರಿಮೆ ಬಾರದಂತೆ ಗಮನ ವಹಿಸಬೇಕು. ಬಡವರ ಮಕ್ಕಳು ಅನಾನುಕೂಲಕತೆ ಮಧ್ಯೆ ಸಾಧನೆ ಮಾಡುವುದರಿಂದ ಅವರಿಗೆ ಶಿಕ್ಷಕರು ಬೆನ್ನುತಟ್ಟಿ ಪ್ರೋತ್ಸಾಹಿಸಬೇಕು.

ಕೃತಕ ಬುದ್ದಿಮತ್ತೆ ಬಹಳ ದೊಡ್ಡ ಬದಲಾವಣೆ ತರಲಿದ್ದು, ಮುಂಬರುವ ದಿನಗಳಲ್ಲಿ ಶಿಕ್ಷಕರ–ರಿಗೆ ಸವಾಲಾಗಲಿದೆ. ಇದರಿಂದ ಒಳ್ಳೆಯದು ಮತ್ತು ಕೆಟ್ಟದ್ದೂ ಎರಡೂ ಆಗುತ್ತದೆ. ಕೃತಕ ಬುದ್ಧಿಮತ್ತೆಯಲ್ಲಿ ಮಾನವೀಯ ಸ್ಪರ್ಷ(ಊಣಟಚಿಟಿ ಖಿಂಣಛಿ) ಗಳಿಗೆ ಆಸ್ಪದವಿರುವುದಿಲ್ಲ. ಹೀಗಾಗಿ ಶಿಕ್ಷಕರು ಅಂತರ್ಜಾಲ ಬಳಸಿಕೊಂಡು ಸುಳ್ಳುಸುದ್ದಿಗಳನ್ನು ಬಿಟ್ಟು, ವಿಶ್ವಾಸಾರ್ಹತೆ, ಸತ್ಯ ಸಂಗತಿಗಳ ಬಗ್ಗೆ ಅಪಡೇಟ್ ಆಗಬೇಕು. ಪಾಪ– ಪುಣ್ಯದ ಅರಿವಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಒಳಿತನ್ನು ಮಾಡಿದರೆ, ಅದರ ಪುಣ್ಯ ಪ್ರತಿಯೊಬ್ಬರಿಗೂ ಸಿಗುತ್ತದೆ. ನಾನು ಸಾಧ್ಯವಿರುವಷ್ಟು ಬಡವರಿಗೆ ಶೈಕ್ಷಣಿಕ ನೆರವು ನೀಡುತ್ತಿದ್ದೇನೆ. ಸರಕಾರಿ ಕೋಟಾದಡಿ ಸೀಟು ಪಡೆದ ಬಡ ವಿದ್ಯಾರ್ಥಿಗಳಿಗೆ ನೆರವು ನೀಡುತ್ತೇನೆ. ಅವರ ಕನಸು ನನಸು ಮಾಡಲು ಸಹಾಯ ಮಾಡುತ್ತಿದ್ದೇನೆ. ಹೀಗಾಗಿ ಶಿಕ್ಷಕರ ವೃತ್ತಿ ಪವಿತ್ರ ಮತ್ತು ಶ್ರೇಷ್ಠವಾಗಿದೆ. ಕಾರ್ಯಕ್ರಮದಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳಿಗೆ ಗೌರವ ಸಲ್ಲಿಸಿರುವ ಶಿಕ್ಷಕರು ಸ್ವಾಮೀಜಿಗಳ ಆಶಯದಂತೆ ಆದರ್ಶ ಶಿಕ್ಷಕರಾಗಿ ಬಾಳಬೇಕು ಎಂದು ಅವರು ಕರೆ ನೀಡಿದರು.

ಇದೇ ವೇಳೆ, ಹೊರ ರಾಜ್ಯಗಳ ಶಿಕ್ಷಕರು ಸಲ್ಲಿಸಿದ ಮನವಿಗೆ ಸ್ಪಂದಿಸಿ, ಅವರ ಬೇಡಿಕೆಗಳಿಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಸ್ಪಂದಿಸಲಾಗುವುದು ಎಂದು ಎಂ. ಬಿ. ಪಾಟೀಲ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಾಧನೆ ಮಾಡಿದ ಶಿಕ್ಷಕರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕುಂಟೋಜಿ ಸಂಸ್ಥಾನ ಹಿರೇಮಠದ ಚನ್ನವೀರ ದೇವರು, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎನ್. ಎಚ್. ನಾಗೂರ, ಆದರ್ಶ ಶಿಕ್ಷಕರ ವೇದಿಕೆಯ ಜಿಲ್ಲಾಧ್ಯಕ್ಷ ಉಮೇಶ ಕವಲಗಿ, ಅಮ್ಮನ ಮಡಿಲು ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ನಿವೃತ್ತ ಉಪನಿರ್ದೇಶಕಿ ಸಾಯಿರಾಬಾನು ಖಾನ, ನಗರ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ, ವಿಜಯಪುರ ಗ್ರಾಮೀಣ ಶಿಕ್ಷಣಾಧಿಕಾರಿ ಪ್ರಮೋದಿನಿ ಬಳೋಲಮಟ್ಟಿ, ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತ ಸಿದ್ದಣ್ಣ ಸಕ್ರಿ, ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸುರೇಶ ಶೆಡಶ್ಯಾಳ, ಯುವ ಪರಿಷತ ಜಿಲ್ಲಾಧ್ಯಕ್ಷ ಶರಣು ಸಬರದ, ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಜುಬೇರ ಕೆರೂರ, ಎಂ. ಎಸ್. ಭೂಸಗೊಂಡ, ಶಂಕರ ಖಂಡೇಕರ, ಎಸ್. ಎಸ್. ಜೇವೂರ, ರಾಜು ಬಿಸನಾಳ, ಎಸ್. ಎಸ್. ಪಾಟೀಲ, ಆನಂದ ಮೂಲಿಮನಿ, ಶಿವಾನಂದ ಮಂಗಾನವರ, ಎಸ್. ಡಿ. ಪಾಟೀಲ, ಎಸ್. ಆರ್. ಪಾಟೀಲ, ಎಸ್. ಎಸ್. ಸೋಲಾಪುರ, ಎಂ. ಕೆ. ಪಾಟೀಲ, ಬಸವರಾಜ ಅಮರಪ್ಪಗೋಳ, ಮುತ್ತಪ್ಪ ಪೂಜಾರಿ ಸೇರಿದಂತೆ ನಾನಾ ಮುಖಂಡರು ಉಪಸ್ಥಿತರಿದ್ದರು.

ಜಗದೀಶ ಬೋಳಸೂರ ಸ್ವಾಗತಿಸಿದರು. ಎಚ್. ಕೆ. ಬೂದಿಹಾಳ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಬೂಲ್ ಕೊಕಟನೂರ ಮತ್ತು ರೇವತಿ ಬೂದಿಹಾಳ ನಿರೂಪಿಸಿದರು. ಸಂತೋಷ ಕುಲಕರ್ಣಿ ವಂದಿಸಿದರು.



# ಜನಮನದಲ್ಲಿ ನೆಲೆ ನಿಂತ ನಾಟಕಕಾರ ಕಿರಣಗಿ

**ಉದಯರಶ್ಮಿ ನ್ಯೂಸ್**

ಇಂಡಿ: ರಾಷ್ಟ್ರ ಮಟ್ಟದ ಆದ–ರ್ಶ ಶಿಕ್ಷಕರಾಗಿ ಗುರುತರ ಸೇವೆ ಸಲ್ಲಿಸಿ ಸಾಮಾಜಿಕ ನಾಟಕಕಾರರಾಗಿ ಜನ ಮನದಲ್ಲಿ ನೆಲೆ ನಿಂತವರು ಮೋಹನ ಚಂದ ಕಿರಣಗಿ ಅವರು ಎಂದು ಕನ್ನಡ ಸಾಹಿತ್ಯ ಪರಿಷತ್ತು ಇಂಡಿ ಘಟಕದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ಅಭಿಪ್ರಾಯ ಪಟ್ಟರು. ಅವರು ಇಂಡಿಯ ಭೀಮಾಂತರಂಗ ಆನ್ ಲೈನ್ ಸಾಹಿತ್ಯಿಕ, ಸಾಂಸ್ಕೃತಿಕ ವೇದಿಕೆ ಅಡಿಯಲ್ಲಿ ಜರುಗಿದ ಎರಡನೇ ಉಪನ್ಯಾಸ ಮಾಲಿಕೆಯಲ್ಲಿ ಸಾಮಾಜಿ–ಕ ನಾಟಕಕಾರ ಮೋಹನಚಂದ ಕಿರಣಗಿ ಅವರ ಬದುಕು ಬರಹ ಎಂಬ ವಿಷಯದ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡಿದರು.

ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕನಾಗಿ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಪ್ರೀತಿಸಿ ತಾನು ಕೆಲಸ ಮಾಡುವ ಊರಿನ ಸ್ಥಿತಿಗತಿ ಸುಧಾರಿಸಲು ಪ್ರಯತ್ನಿಸಿದ ವ್ಯಕ್ತಿಗಳು. ಹಾಗೆಯೇ ಅಣ್ಣತಂಗಿ ಮತ್ತೂ ಆದರ್ಶ ಪ್ರೇಮ ಎಂಬಂಥ ಸಾಮಾಜಿಕ ನಾಟಕಗಳನ್ನು ರಚಿಸಿ ಅಭಿನಯಿಸಿ ಎಲ್ಲ ಹಳ್ಳಿಗಳ ಮನೆ ಮಾತಾಗಿದ್ದವರು ಕಿರಣಗಿ ಅವರು ಕಲ್ಯಾಣ ಕರ್ನಾಟಕ ಮತ್ತು ಮುಂಬೈ ಕರ್ನಾಟಕದ ಜನಮಾನಸದಲ್ಲಿ ನೆಲೆಯೂರಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಇಂಡಿ ಜಿ. ಆರ್. ಜಿ ಕಾಲೇಜಿನ ನಿವೃತ ಪ್ರಾಚಾರ್ಯರಾದ ಎ. ಎಸ್. ಗಾಣಿಗೇರ ಅವರು ಶ್ರೀರಂಗರ ಹಾದಿಯಲ್ಲಿ ನಡೆದವರು ಮೋಹನಚಂದ್ ಅವರು ಈ ನೆಲದ ಆಸ್ತಿ ಎಂದು ಹೇಳಿ ಭೀಮಾಂತರಂಗ ವೇದಿಕೆಯ ಕಾರ್ಯ ಶ್ಲಾಘನೀಯ ಎಂದರು.

ಸಾಹಿತಿಗಳಾದ ಡಾ.ಚನ್ನಪ್ಪ ಕಟ್ಟಿ, ಡಾ. ರಾಜಶೇಖರ ಮಠಪತಿ, ಡಿ. ಎನ್.ಅಕ್ಕಿ, ರಾಚು ಕೊಪ್ಪ, ಸುಜಾತಾ ಬೀಳಗಿ,ಶಶಿಕಲಾ ಬಡಿಗೇರ, ಸಂಗನಗೌಡ ಹಚಡದ, ರವಿಕುಮಾರ ಅರಳಿ, ದಾನಯ್ಯ ಮಠಪತಿ, ಪ್ರಶಾಂತ ಕುಲಕರ್ಣಿ ಸೇರಿದಂತೆ ಹಲವಾರು ಜನ ಸಾಹಿತ್ಯ ಆಸಕ್ತರು ಹಾಜರಾಗಿದ್ದರು.

# ವಿಜ್ಞಾನಿ ಡಾ.ಕುಶಾಲ ದಾಸ ಇತರರಿಗೆ ಮಾದರಿ :ಸಚಿವ ಪಾಟೀಲ

**ಉದಯರಶ್ಮಿ ನ್ಯೂಸ್**



ವಿಜಯಪುರ: ಶ್ರೇಷ್ಠ ವಿಜ್ಞಾನಿ ಡಾ. ಕುಶಾಲ ದಾಸ ಅವರು ತಮ್ಮ ಸಾಧನೆಗಳ ಮೂಲಕ ಇತರ–ರಿಗೆ ಮಾದರಿಯಾಗಿದ್ದಾರೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ನಗರದ ಬಿ. ಎಲ್. ಡಿ. ಇ ಡೀಮ್ಡ್ ವಿಶ್ವವಿದ್ಯಾಲಯದ ಫಿಜಿಯಾಲಜಿ ವಿಭಾಗದ ಡಿಸ್ಟಿಂಗ್ವಿಷ್ಡ್ ಚೇರ್ ಪ್ರೊಫೆಸರ್ ಡಾ. ಕುಶಾಲ ಕೆ. ದಾಸ್ ಅವರಿಗೆ ರಾಜ್ಯ ಸರಕಾರ ವಿಕಲಚೇತನರ ಕ್ಷೇತ್ರದಲ್ಲಿನ ಸೇವೆಗಾಗಿ ರಾಜ್ಯ ಮಟ್ಟದ ವೈಯಕ್ತಿಕ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತ್ತು. ಈ ಹಿನ್ನೆಲೆಯಲ್ಲಿ ವಿವಿ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಡಾ. ಕುಶಾಲ ಕೆ. ದಾಸ ಅವರನ್ನು ಸನ್ಮಾನಿಸಿ ಸಚಿವರು ಮಾತನಾಡಿದರು.

ಡಾ. ಕುಶಾಲ ಕೆ. ದಾಸ ತಮ್ಮ ಕೆಲಸ ಕಾರ್ಯಗಳ ಮೂಲಕ ಬಿ.ಎಲ್.ಡಿ.ಇ ಸಂಸ್ಥೆಗೆ ಬೆನ್ನೆಲುಬಾಗಿದ್ದಾರೆ. ಸಂಶೋಧನೆಗಳ ಸಾಧನೆಯ ಮೂಲಕ ನಮ್ಮೆಲ್ಲರಿಗೂ ಸ್ಪೂರ್ತಿಯಾಗಿದ್ದಾರೆ. ನ್ಯೂನ್ಯತೆಗಳು ಸಾಧನೆಗೆ ಅಡ್ಡಿಯಾಗುವುದಿಲ್ಲ ಎಂಬುದನ್ನು ಸಾಧಿಸಿ ತೋ–ರಿಸಿದ್ದಾರೆ. ಸಮಸ್ಯೆಗಳನ್ನು ಮೆಟ್ಟಿ ನಿಂತು ಅವರು ಮಾಡಿರುವ ಸಾಧನೆಗಳ ಬಗ್ಗೆ ನಮಗೆಲ್ಲರಿಗೂ ಹೆಮ್ಮೆಯಿದೆ. ಸದಾ ಲವಲವಿಕೆಯಿಂದ ಇರುವ ಅವರು ಯುವ ವೈದ್ಯರು ಮತ್ತು ಸಂಶೋಧಕರಿಗೆ ಮಾದ–ರಿಯಾಗಿದ್ದಾರೆ. ಅವರ ಪ್ರಾಮಾಣಿಕತೆ, ಸೇವೆ, ಸಂಶೋಧನೆ, ಕಾಯಕ ನಿಷ್ಠೆ ಇತರರಿಗೂ ಪ್ರೇರಣೆಯಾಗಿದೆ. ಇಂದಿನ ಯುವ ಪೀಳಿಗೆಗೆ ಅಧ್ಯಯನ ಮತ್ತು ಸಂಶೋಧನೆಯ ಬಗ್ಗೆ ಜಾಗೃತಿ ಮೂಡಿಸಲು ಅವರ ಸೇವೆಯನ್ನು ಬಳಸಿಕೊಳ್ಳಲಾವುದು. ಪ್ರತಿವಾರ ಶಾಲೆಗಳ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಾಗುವುದು ಎಂದು ಎಂ. ಬಿ. ಪಾಟೀಲ ತಿಳಿಸಿದರು.

ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಕುಶಾಲ ಕೆ. ದಾಸ, ಪಶ್ಚಿಮ ಬಂಗಾಳದಲ್ಲಿ ಜನಿಸಿದ್ದರೂ, ನನ್ನ ಜೀವನದ ಬಹುತೇಕ ಸಮಯ ವಿಜಯಪುರದಲ್ಲಿಯೇ ಕಳೆಯುತ್ತಿದ್ದೇನೆ. ನಾನು ವಿಜಯಪುರದವನಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ರಾಜ್ಯ ಸರಕಾರ ನನ್ನ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿರುವುದು ನನ್ನ ಸಂಶೋಧನೆಗಳನ್ನು ಹೆಚ್ಚಿಸಲು ಸ್ಪೂರ್ತಿ ನೀಡಿದೆ. ನನಗೆ ವಹಿಸುವ ಕೆಲಸಗಳನ್ನು ಶ್ರದ್ಧಾಪೂರಕವಾಗಿ ಮಾಡುತ್ತೇನೆ. ನನ್ನ ಕೆಲಸ ಕಾರ್ಯಗಳಿಗೆ ಸಚಿವ ಎಂ. ಬಿ. ಪಾಟೀಲ ಅವರು ಸಂಪೂರ್ಣ ಸಹಕಾರ ನೀಡುತ್ತಿರುವುದು ನನಗೆ ಉತ್ಸಾಹವನ್ನು ಹೆಚ್ಚಿಸುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿವಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಆರ್. ಎಸ್. ಮುಧೋಳ, ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಆಸ್ಪತ್ರೆ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ, ಪ್ರಿ–ಪ್ಯಾರಾ ವಿಭಾಗದ ಉಪಪ್ರಾಚಾರ್ಯೆ ಡಾ. ಸುಮಂಗಲಾ ಪಾಟೀಲ, ಫಾರೆನ್ಸಿಕ್ ಮೆಡಿಸೀನ್ ವಿಭಾಗದ ಮುಖ್ಯಸ್ಥ ಡಾ. ಉದಯಕುಮಾರ ಚ. ನುಚ್ಚಿ, ಡಾ. ಶ್ರೀಲಕ್ಷ್ಮಿ ಬಗಲಿ, ಡಾ. ಕುಶಾಲ ಕೆ ದಾಸ್ ಅವರ ಪತ್ನಿ ಡಾ. ಸ್ವಸ್ತಿಕಾ ದಾಸ, ಫಿಜಿಯಾಲಜಿ ಸೇರಿದಂತೆ ನಾನಾ ವಿಭಾಗಗಳ ಪ್ರಾಧ್ಯಾಪಕರು ಮುಂತಾದವರು ಉಪಸ್ಥಿತರಿದ್ದರು.

### ಶಾಸಕ ಅಶೋಕ ಮನಗೂಳಿ ಅವರಿಗೆ ಗೋಲಗೇರಿ ತಳವಾರ ಸಮಾಜದ ವತಿಯಿಂದ ಸನ್ಮಾನ

# ತಳವಾರ ಸಮಾಜದ ಬೇಡಿಕೆ ಈಡೇರಿಸಲು ಸಿದ್ಧ :ಶಾಸಕ ಮನಗೂಳಿ

**ಉದಯರಶ್ಮಿ ನ್ಯೂಸ್**



ಗೋಲಗೇರಿ: ಗ್ರಾಮದಲ್ಲಿ ತಳವಾರ ಸಮಾಜದ ವತಿಯಿಂದ ಸಿಂದಗಿ ಮತಕ್ಷೇತ್ರದ ಶಾಸಕ ಅಶೋಕ ಮನಗೂಳಿ ಅವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅಶೋಕ ಮನಗೂಳಿ ಅವರು, ತಳವಾರ ಸಮಾಜದ ಬೇಡಿಕೆಗಳನ್ನು ಈಡೇರಿಸಲು ಸದಾ ಸಿದ್ದವಿರುವುದಾಗಿ ಹೇಳಿದರು.

ಇದೇ ಸಂದರ್ಭದಲ್ಲಿ ತಳವಾರ ಸಮಾಜದ ಗೋಲಗೇರಿ ಗ್ರಾಮದಲ್ಲಿ ಇರುವ ಬಹಳ ವರ್ಷದ ಬೇಡಿಕೆಯಾಗಿದ್ದ ಈರಣ್ಣ ಮುತ್ಯಾ ಗುಡಿಯ ಕಟ್ಟಡದ ಕಾಮಗಾರಿಯುನ್ನು ಶೀಘ್ರದಲ್ಲಿಯೇ ಆರಂಭಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಶಿವು ಹತ್ತಿ, ರವಿರಾಜ ದೇವರಮನಿ, ಬಸವರಾಜ ಮಾರಲಭಾವಿ, ವಿಜುಗೌಡ ಕರ್ನಾಳ, ತಳವಾರ ಸಮಾಜದ ಮುಖಂಡರಾದ ಮಡಿವಾಳ ನಾಯ್ಕೋಡಿ, ಮಂಜುನಾಥ ನಾಯ್ಕೋಡಿ, ರಮೇಶ ತಳವಾರ, ಮಲ್ಲಣ್ಣ ನಾಯ್ಕೋಡಿ, (ಬೆಂಗಳೂರು), ರಾಜು ಯಂಕಂಚಿ, ಚಂದ್ರಾಮ ನಾಯ್ಕೋಡಿ, ಸಿದ್ದಪ್ಪ ನಾಯ್ಕೋಡಿ, ಭಾಗಪ್ಪ ಕೊಂಡಗೂಳಿ, ಭೀಮಣ್ಣ ತಳವಾರ, ಮಲ್ಲಪ್ಪ ನಾಯ್ಕೋಡಿ, ರಾವುತಪ್ಪ ಮಾಗಣಗೇರಿ, ಮಹಾಂತೇಶ ನಾಯ್ಕೋಡಿ, ರಾವುತ್ ನಾಯ್ಕೋಡಿ ಇದ್ದರು.

# ಪಠ್ಯ ಆಧಾರಿತ ನಾಟಕ ಪ್ರದರ್ಶನ ಉದ್ಘಾಟನೆ

**ಉದಯರಶ್ಮಿ ನ್ಯೂಸ್**



ಇಂಡಿ:ಪಟ್ಟಣದ ಹೊರವಲಯದಲ್ಲಿರುವ ಅಮರ್ ಮಂಗಲ ಕಾರ್ಯಾಲಯದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಕಲ್ಪುರ ಸಂಸ್ಕೃತಿಕ ಕಲಾಸಂಘ ಕಲ್ಲೂರು ಸಹಯೋಗದಲ್ಲಿ ಪಿಯುಸಿ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಕನ್ನಡ ವಿಷಯದಲ್ಲಿ ಬರುವ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾಕ್ಟರ್ ಚಂದ್ರಶೇಖರ್ ಕಂಬಾರರ ಬೋಳೇಶಂಕರ ನಾಟಕ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಮಗನಾದ ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ ದೀರ್ಘ ಗದ್ಯ ಕೃಷ್ಣೆಗೌಡನ ಆನೆ ಎಂಬ ಪಠ್ಯಾಧರಿತ ನಾಟಕವನ್ನು ಪ್ರದರ್ಶನ ಇಂಡಿ ತಾಲೂಕಿನ ಪದವಿಪೂರ್ವ ಕಾಲೇಜುಗಳ ಕನ್ನಡ ಉಪನ್ಯಾಸಕ ಉಪನ್ಯಾಸಕಿಯರು ಹಾಗೂ ಶ್ರೀಧರ ಗೌಡ ಬಿರಾದಾರ, ಎಸ್.ಎಸ್.ಈರಣ್ಣಕೇರಿ, ವಿಜಯಕುಮಾರ ರಾಠೋಡ, ಮಲ್ಲಿಕಾರ್ಜುನ ಕಳ್ಳಿಮನಿ, ಎಮ್.ಕೆ.ಪಾಟಿಲ, ಉಪನ್ಯಾಸಕಿಯರದ ಶಖೀನಾ ಪಟೇಲ್,ಎಸ್.ಎಸ್ ಹೂಗಾರ , ಶ್ವೇತಾ ಮೇಡಮ್ ಎಲ್ಲರೂ ತಮಟೆ ಬಾರಿಸುವುದರ ಮೂಲಕ ಉದ್ಘಾಟಿಸಿದರು.

ಪ್ರಸ್ತಾವಿಕವಾಗಿ ನಾಟಕದ ವಸ್ತು ವಿಷಯ ಕುರಿತು ಉಪನ್ಯಾಸಕ ಸದಾನಂದ ಎಸ್ ಈರನಕೇರಿ ಅವರು ಮಾತನಾಡುತ್ತಾ ಇಂದಿನ ವಿದ್ಯಾರ್ಥಿ – ವಿದ್ಯಾರ್ಥಿನಿಯರಿಗೆ ಪಠ್ಯ ಆಧಾರಿತ ನಾಟಕಗಳು ಅತ್ಯಂತ ಪರಿಣಾಮ ಬೀರುವುದರಿಂದ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಲಿಕ್ಕೆ ಸಾಧ್ಯ ಹಾಗೂ ಚಿತ್ರಗಳನ್ನು ನೋಡಿದಾಗ ಅಚ್ಚಳಿಯದೆ ನಮ್ಮ ಸ್ಮೃತಿಪಟಲದಲ್ಲಿ ಉಳಿಯುತ್ತವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಉಪನ್ಯಾಸಕಿ ಪಟೇಲ್ ಮಾತನಾಡಿ, ಮಕ್ಕಳು ನಾಟಕ ವೀಕ್ಷಣೆ ಮಾಡುವುದರ ಮೂಲಕ ಅತ್ಯಂತ ಖುಷಿಯಿಂದ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳು ಪಡೆದುಕೊಳ್ಳಲಿಕ್ಕೆ ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಇಂಡಿ ನಗರದ ಎಲ್ಲಾ ಪದವಿಪೂರ್ವ ಕಾಲೇಜಿನ ಉಪನ್ಯಾಸಕರು ಸುಮಾರು 500 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಅಕ್ರಮ ಪಡಿತರ ಅಕ್ಕಿ ಸಾಗಾಟ :ಈರ್ವರು ವಶಕ್ಕೆ

**ಉದಯರಶ್ಮಿ ನ್ಯೂಸ್**



ಇಂಡಿ: ಸರ್ಕಾರ ಬಡವರು ಹಸಿವಿನಿಂದ ಬಳಲಬಾರದು ಎಂದು ಪಡಿತರ ಅಂಗಡಿಗಳ ಮೂಲಕ ಬಡಜನರಿಗೆ ಉಚಿತವಾಗಿ ಅಕ್ಕಿ ಸೇ–ರಿದಂತೆ ಕೆಲ ಆಹಾರ ಧಾನ್ಯಗಳನ್ನು ನೀಡುತ್ತದೆ. ಕೇಂದ್ರ ಸರ್ಕಾರ ಪ್ರತಿಯೊಬ್ಬ ಪಡಿತರದಾರನಿಗೆ ಐದು ಕಿಲೋ ಅಕ್ಕಿ ನೀಡಿದ್ರೆ, ರಾಜ್ಯ ಸರ್ಕಾರ ಐದು ಕಿಲೋ ಅಕ್ಕಿ ಬದಲಾಗಿ ಇದೀಗ ಹಣವನ್ನು ನೀಡುತ್ತಿದೆ. ಆದ್ರೆ, ಬಡ ಜನರ ಹೊಟ್ಟೆ ತುಂಬಿಸಬೇಕಿದ್ದ ಪಡಿತರ ಧಾನ್ಯಗಳು, ಬಡವರ ಹೊಟ್ಟೆ ತುಂಬಿಸದೇ ಕಾಳ ಸಂತೆಯಲ್ಲಿ ಮಾರಾಟವಾಗುತ್ತಿವೆ.

ಅದಕ್ಕೆ ಸಾಕ್ಷಿ ಎಂಬಂತೆ ನಿನ್ನೆಯ ದಿನ ಅಕ್ರಮ ಅಕ್ಕಿ ಸಾಗಾಟ ವೇಳೆ ಖಚಿತ ಮಾಹಿತಿ ಹಿನ್ನೆಲೆಯಲ್ಲಿ ಆಹಾರ ಇಲಾಖೆ ಶಿರಸ್ತೆದಾರ ಪರಮಾನಂದ ಹಾಗೂ ಪೊಲೀಸರು ದಾಳಿಗೈದು ಅಪಾರ ಪ್ರಮಾಣದ ಅಕ್ಕಿ ಹಾಗೂ ಖದಿಮರನ್ನು ಬಂಧಿಸಿರುವ ಘಟನೆ ಇಂಡಿ ತಾಲ್ಲೂಕಿನ ಬಸನಾಳ ರಸ್ತೆಯಲ್ಲಿ ನಡೆದಿದೆ.

ಅಂಜಾದ ಪಠಾಣ, ಅವಿನಾಶ್ ಘುಲೆ ಬಂಧಿತ ಆರೋಪಿಗಳು.

ಸಂಭಾಜಿ ಗಾಯಕವಾಡ, ಪವನ ತೊಟ್ಲಾ ಈ ಇಬ್ಬರು ಮಾಲೀಕರು ಪರಾರಿಯಾಗಿದ್ದಾರೆ.

ಆರೋಪಿಗಳು ಲಾರಿಯಲ್ಲಿ 8,23,310 ಮೌಲ್ಯದ 28,390 ಕೆಜಿ ಅಕ್ಕಿ ಸಾಗಾಟ ಮಾಡುವಾಗ ಖಚಿತ ಮಾಹಿತಿ ಆಧರಿಸಿ ಪೊಲೀಸರು ದಾಳಿಗೈದು ಅಕ್ಕಿ, ಲಾರಿಯನ್ನು ಜಪ್ತಿಗೈದಿದ್ದಾರೆ. ಈ ಕುರಿತು ಹೊರ್ತಿ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರಾಷ್ಟ್ರೀಯ ಲೋಕ ಅದಾಲತ್: 1877 ಪ್ರಕರಣಗಳು ಇತ್ಯರ್ಥ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ತಾಲೂಕು ಕಾನೂನು ಸೇವಾ ಸಮಿತಿಯು ಸಹಯೋಗದಲ್ಲಿ ಶನಿವಾರ ಜರುಗಿದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 976 ಸಿವ್ಹಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು, 3 ಬ್ಯಾಂಕ್ ಪ್ರಕರಣಗಳು, 898 ಟ್ರಾಫಿಕ್ ಚಲನ್‌ಗಳು ಸೇರಿದಂತೆ ಒಟ್ಟು 1,877 ಪ್ರಕರಣಗಳನ್ನು ಹಿರಿಯ ಸಿವ್ಹಿಲ್ ನ್ಯಾಯಾಧೀಶರು, ಹೆಚ್ಚುವರಿ ಹಿರಿಯ ಸಿವ್ಹಿಲ್ ನ್ಯಾಯಾಧೀಶರು, ಕಿರಿಯ ಸಿವ್ಹಿಲ್ ನ್ಯಾಯಾಧೀಶರು, ಹೆಚ್ಚುವರಿ ಕಿರಿಯ ಸಿವ್ಹಿಲ್ ನ್ಯಾಯಾಧೀಶರು ಇತ್ಯರ್ಥಪಡಿಸಿದರು.

ಹಿರಿಯ ಸಿವ್ಹಿಲ್ ನ್ಯಾಯಾಧೀಶ ಪ್ರಕಾಶ ಅರ್ಜುನ ಬನಸೋಡೆ ಅವರು 383 ಪ್ರಕರಣಗಳನ್ನು, ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶೆ ತಯ್ಯಾಬಾ ಸುಲ್ತಾನ ಅವರು 347 ಪ್ರಕರಣಗಳನ್ನು, ಸಿವ್ಹಿಲ್ ನ್ಯಾಯಾಧೀಶೆ ತೇಜಸ್ವಿನಿ ಸೊಗಲದ ಅವರು 51 ಪ್ರಕರಣಗಳನ್ನು, ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶೆ ಸೌಮ್ಯ ಹೂಲಿ ಅವರು 196 ಪ್ರಕರಣಗಳನ್ನು ವಿಲೇವಾರಿ ಮಾಡಿದರು. ನಾಲ್ಕು ನ್ಯಾಯಾಲಯಗಳಲ್ಲಿ 898 ಟ್ರಾಫಿಕ್ ಚಲನ್‌ಗಳು, 3 ಬ್ಯಾಂಕ್ ಪ್ರಕರಣಗಳನ್ನು ವಿಲೇವಾರಿಯಾದವು.

ಲೋಕ ಅದಾಲತದಲ್ಲಿ ಹಿರಿಯ ಹಾಗೂ ಕಿರಿಯ ನ್ಯಾಯವಾದಿಗಳು ಭಾಗವಹಿಸಿದ್ದರು.

# ಕ್ರೀಡೆಗೆ ಪ್ರೋತ್ಸಾಹ ಅಗತ್ಯ :ಡಿಎಚ್‌ಓ ಹುಬ್ಬಳ್ಳಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕ್ರೀಡಾಸಕ್ತ-ರಿಗೆ ಸಾಮೂಹಿಕವಾಗಿ ಪ್ರೋತ್ಸಾಹ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಹೇಳಿದರು.

ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಶನಿವಾರ ನಡೆದ ರಾಜ್ಯ ಮಟ್ಟದ ಮುಕ್ತ ಟೆನಿಸ್ ಬಾಲ್ ಹಾಗೂ ಕ್ರಿಕೇಟ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡಾಕೂಟದಲ್ಲಿ ತಂಡ ಗೆಲ್ಲಬಾರದು ಬದಲಾಗಿ ಕ್ರೀಡೆ ಗೆಲ್ಲಬೇಕು. ಉತ್ತಮ ಪ್ರದರ್ಶನ ನೀಡಿ ಮುನ್ನಡೆಯಬೇಕು ಎಂದರು.



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸುರೇಶ ಶಡಶ್ಯಾಳ ಮಾತನಾಡಿ ಕ್ರೀಡಾ ಸ್ಪರ್ಧಾಳುಗಳಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಡಾ.ಸಂದೀಪ ಸಜ್ಜನ, ಶಿವಾನಂದ ಮಾಸ್ತಹೋಳಿ, ಹರೀಶ ಪೂಜಾರ, ಎಂ.ಬಿ.ಬಳ್ಳಾರಿ, ಜುಬೇರ ಕೇರೂರ, ಸಿ.ಐ.ರಾಠೋಡ, ಮುಹ್ಮದಯಾಸೀನ್ ಮೊಮಿನ್, ಎ.ಎ.ಸಿಂದಗಿಕರ, ಹೇಮಂತ ಕುಲಕರ್ಣಿ, ಮಹೇಶ ನಾವಲಗಿ, ಸುನೀಲ ರೂಡಗಿ, ಸುರೇಮದ್ರ ಮಾನಕರ, ಸಂತೋಷ ದೇವಲಾಪುರ, ಅಜಯ ಉತ್ನಾಳ ಇದ್ದರು.

# ಪ್ರೇಮಾ ಕರಜಗಿ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ನಗರದ ಹೊರವಲಯದ ಆಲಮೇಲ ರಸ್ತೆಯಲ್ಲಿರುವ ಪಿ.ಇ.ಎಸ್ ಶಿಕ್ಷಣ ಸಂಸ್ಥೆಯ ಶ್ರೀಮತಿ ಪ್ರೇಮಾ ಭೀ. ಕರ್ಜಗಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ಪ್ರಸಕ್ತ ಸಾಲಿನ ಬಿಎ ಪದವಿ ಅಂತಿಮ ವರ್ಷದ ಪರೀಕ್ಷೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಅಮೃತಾ ಯಾತನೂರ ಶೇ.91 ಪ್ರಥಮ ಸ್ಥಾನ, ಶಾರದಾ ಗಾಡದ ಶೇ.90 ದ್ವಿತೀಯ ಸ್ಥಾನ, ಶಿಲ್ಪಾ ಮಠ ಶೇ.89.8 ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಐಶ್ವರ್ಯ ಉಡಚಾಣ ಶೇ.89.14, ಭಾಗ್ಯಶ್ರೀ ಗುತ್ತರಗಿ ಶೇ.88.57 ಪಡೆದುಕೊಂಡಿದ್ದಾರೆ. ಈ ಬಾರಿ ಮಹಾವಿದ್ಯಾಲಯದ ಪಲಿತಾಂಶ 100ಕ್ಕೆ 100ರಷ್ಟಾಗಿದೆ.

ಈ ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಕಾರ್ಯದರ್ಶಿ ಬಿ.ಪಿ.ಕರ್ಜಗಿ ಹಾಗೂ ನಿರ್ದೇಶಕ ಮಂಡಳಿ ಮತ್ತು ಪ್ರಾಚಾರ್ಯ ಗುರು ಕಡಣಿ, ಮಾರ್ಗದರ್ಶಕರಾದ ಆರ್.ಬಿ.ಗೋಡಕರ, ಕೆ.ಎಚ್. ಸೋಮಾಪೂರ, ಆಯ್.ಬಿ. ಬಿರಾದಾರ ಸೇರಿದಂತೆ ಮಹಾವಿದ್ಯಾಲಯದ ಬೋಧಕ



ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಮಕ್ಕಳು ತಮ್ಮ ಹಕ್ಕುಗಳನ್ನು ಸದುಪಯೋಗಪಡಿಸಿಕೊಳ್ಳಲಿ

**ಉದಯರಶ್ಮಿ ನ್ಯೂಸ್**

ಸಿಂದಗಿ: ಮಕ್ಕಳಿಗಾಗಿ ಮಕ್ಕಳ ಹಕ್ಕುಗಳಿವೆ. ಅವುಗಳನ್ನು ಅವರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮಕ್ಕಳ ಹಿರಿಯ ಸಾಹಿತಿ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಹ.ಮ. ಪೂಜಾರ ಹೇಳಿದರು.

ಪಟ್ಟಣದ ಭುವನೇಶ್ವರಿ ವಿದ್ಯಾವರ್ಧಕ ಸಂಸ್ಥೆಯ ಕಾವ್ಯಾ ಶಾಲೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಾವ್ಯಾ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಕರ್ನಾಟಕ ಸಂಭ್ರಮ 50ರ ನಿಮಿತ್ಯ ಹಮ್ಮಿಕೊಂಡ ಮಕ್ಕಳ ಕಲರವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಹಳಷ್ಟು ಮಕ್ಕಳಿಗೆ ಅವರ ಹಕ್ಕುಗಳ ಬಗ್ಗೆ ಜಾಗೃತಿ ಇಲ್ಲದಿರುವುದು ನೋವಿನ ಸಂಗತಿ. ಹಾಗಾಗಿ ಮಕ್ಕಳು ಮೊದಲು ನಿಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು.



ಮಕ್ಕಳಿಗಾಗಿಯೇ ಸರಕಾರ ಭಾಗವಹಿಸುವ ಹಕ್ಕು, ಸಂರಕ್ಷಣೆ ಮಾಡುವ ಹಕ್ಕು, ಭಾಗವಹಿಸುವ ಹಕ್ಕು ಸೇರಿದಂತೆ ಅನೇಕ ಹಕ್ಕುಗಳನ್ನು ಜಾರಿಗೆ ತಂದಿದ್ದಾರೆ. ಅದನ್ನು ನೀವೆಲ್ಲಾ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಸಂಗಮ ಸಂಸ್ಥೆಯ ಸಹ ನಿರ್ದೇಶಕಿ ಸಿಂತಿಯಾ, ಜಯಶ್ರೀ ಕುಲಕರ್ಣಿ, ಎಂ.ಎಂ. ಹಂಗರಗಿ ಮಾತನಾಡಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಆದೀಶೇಷ ಮಠದ ನಾಗರತ್ನ ರಾ-ಜಯೋಗಿ ವೀರರಾಜೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.

ಇದೇ ಸಂದರ್ಭದಲ್ಲಿ ಕಸಾಪ ಅಧ್ಯಕ್ಷ ಶಿವಾನಂದ ಬಡಾನೂರ, ಗೌರವಾಧ್ಯಕ್ಷ ಮಹಾಂತೇಶ ಪಟ್ಟಣಶೆಟ್ಟಿ, ಜಿ.ಎಸ್.ಪಟ್ಟಣಶೆಟ್ಟಿ, ಮಲ್ಲನಗೌಡ ಪಾಟೀಲ, ಪಂಡಿತ ಯಂಪೂರೆ, ಸಂದೀಪ ಚಾಂದಕವಟೆ, ರಾಜು ಕುಂಬಾರ, ಭಾಗ್ಯಶ್ರೀ, ಶಾಂತೂ ರಾಣಾಗೋಳ, ಸೇ-ರಿದಂತೆ ಶಾಲೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಸಾಹಿತ್ಯಾಭಿಮಾನಿಗಳು ಇದ್ದರು

# ಪೋಕ್ಸೋ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ ) ಮತ್ತು ಸನ್ಯಾಸಾಶ್ರಮ

ಇಷ್ಟೊಂದು ದುರ್ಬಲ ವ್ಯವಸ್ಥೆಯಲ್ಲಿ ನಾವಿದ್ದೇವೆಯೇ..

ಒಂದು ಪ್ರಖ್ಯಾತ, ಬೃಹತ್ ಶಿಕ್ಷಣ ಸಂಸ್ಥೆಗಳನ್ನು ನಡೆಸುವ, ರಾಜ್ಯದ ಪ್ರತಿಷ್ಠಿತ ಮಠ ಮತ್ತು ಅದರ ಮುಖ್ಯಸ್ಥರಾಗಿದ್ದ ರಾಜ್ಯದ ಅತ್ಯಂತ ಮಹತ್ವದ ಪ್ರಭಾವಿ ವ್ಯಕ್ತಿಯೂ ಆಗಿದ್ದ, ಪ್ರಗತಿಪರ ಚಿಂತನೆಯ ಕ್ರಾಂತಿಕಾರಿ ಮಠಾಧೀಶರು ಆಗಿದ್ದ ಗೌರವಾನ್ವಿತ ಪೂಜ್ಯ ಸ್ವಾಮೀಜಿಗಳೆಂಬ ವ್ಯಕ್ತಿಯನ್ನು ಒಂದು ದಿನ ದಿಢೀರನೆ ರಾಜ್ಯದ




**ಉದಯರಶ್ಮಿ ದಿನಪತ್ರಿಕೆ**

ಪೋಲೀಸರು ಬಂಧಿಸುತ್ತಾರೆ. ಅದಕ್ಕೆ ತನಿಖಾಧಿಕಾರಿಗಳು ನೀಡುವ ಕಾರಣ ಅವರ ಮೇಲೆ ಹೆಣ್ಣು ಮಕ್ಕಳಿಬ್ಬರು ನೀಡಿರುವ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರದ ದೂರು. ಇದನ್ನು ಕೇಳಿ ರಾಜ್ಯದ ಜನ ದಿಗ್ಭ್ರಮೆಗೆ ಒಳಗಾಗುತ್ತಾರೆ..

ನಂತರ ಉನ್ನತ ಅಧಿಕಾ-ರಿಗಳಿಂದ ತನಿಖೆ ನಡೆಯುತ್ತದೆ. ಎಲ್ಲಾ ಸಾಕ್ಷಿ, ದಾಖಲೆ, ಹೇಳಿಕೆಗಳನ್ನು ಪರಿಶೀಲಿಸಿ ರಾಜ್ಯದ ಪೋಲೀಸರು ಎರಡು ಪೋಕ್ಸೋ ಪ್ರಕರಣ ದಾಖಲಿಸಿ ವಿವರವಾದ ಆರೋಪ ಪಟ್ಟಿ ಸಲ್ಲಿಸುತ್ತಾರೆ. ಅದರಲ್ಲಿ ಈ ಪ್ರಸಿದ್ಧ ಮತ್ತು ಪ್ರಭಾವಿ ವ್ಯಕ್ತಿಯ ಮೇಲೆ ಅತ್ಯಾಚಾರವೂ ಸೇರಿ ಸಾಕಷ್ಟು ಅಸಹ್ಯ ರೀತಿಯ ವರ್ತನೆಯನ್ನು ಆರೋಪಿಸುತ್ತಾರೆ..

ನೆನಪಿಡಿ ಅವರ ವಯಸ್ಸು ಸುಮಾರು 65 ಮತ್ತು ಅವರು ನಮ್ಮ ನಿಮ್ಮಂತೆ ಸಾಮಾನ್ಯರಲ್ಲ. ಅವರ ಮೇಲೆ ಸುಳ್ಳು ಕೇಸು ಹಾಕುವುದು ಅಷ್ಟು ಸುಲಭವಲ್ಲ. ಈ ಆರೋಪದ ಪರಿಣಾಮ ಅವರು ಜೈಲಿಗೆ ಹೋಗಿ ಪೀಠಾಧಿಪತಿ ಸ್ಥಾನವನ್ನು ಕಳೆದುಕೊಳ್ಳುತ್ತಾರೆ..

ಕೇವಲ 14 ತಿಂಗಳು ಮಾತ್ರ ಕಳೆದಿದೆ. ಇಡೀ ವಾತಾವರಣ ಸಂಪೂರ್ಣ ಬದಲಾಗಿದೆ. ಅವರಿಗೆ ಜಾಮೀನು ಮಂಜೂರಾಗಿದೆ. ಅವರು ಮಠದ ಸ್ಥಳಕ್ಕೆ ಹೋಗಲು ನಿಷೇಧವಿದೆ. ಆದರು ಆ ಮಠದ ಮುಖ್ಯಸ್ಥರು ಈಗ ಅವರೇ. ದೂರದಿಂದಲೇ ಕೋಟ್ಯಾಂತರ ರೂಪಾಯಿಗಳ ಆಸ್ತಿಯ ಮಠವನ್ನು ನಿಯಂತ್ರಿಸುತ್ತಾರೆ. ಮತ್ತೆ ಆ ವ್ಯಕ್ತಿಯ ಪಾದಗಳಿಗೆ ಭಕ್ತರು ಕೈ ಮುಗಿದು ಪೂಜಿಸುತ್ತಾರೆ. ಅವರು ಎಂದಿನಂತೆ ಶ್ರೀ ಶ್ರೀ ಶ್ರೀ ಪರಮ ಪೂಜ್ಯ ಸ್ವಾಮಿಗಳು..

ಇದು ನಾಟಕದ ಒಂದು ಅಧ್ಯಾಯ ಮಾತ್ರ.






ಎರಡನೇ ಅಧ್ಯಾಯದಲ್ಲಿ..

ಆ ವ್ಯಕ್ತಿ ನಿಜವಾದ ಅಪರಾಧಿಯೋ, ನಿರಪರಾಧಿಯೋ ನ್ಯಾಯಾಲಯ ಮುಂದೆಂದೋ ಒಂದು ದಿನ ತೀರ್ಮಾನ ಮಾಡುತ್ತದೆ. ಅದರ ತೀರ್ಪನ್ನು ಪ್ರಶ್ನಿಸುತ್ತಾ ಮೇಲಿನ ನ್ಯಾಯಾಲಯಗಳು ಮತ್ತೆಷ್ಟೋ ವರ್ಷಗಳ ನಂತರ ಮತ್ತೆ ಬೇರೆಯ ತೀರ್ಪು ಕೊಡಬಹುದು. ಅದು ಬೇರೆ ವಿಷಯ. ಆದರೆ..

ಭಾರತದ ಸಂವಿಧಾನ, ಅಪರಾಧ ಕಾನೂನು, ಪೋಲೀಸ್ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ಸಮಾಜದ ಜನಸಾಮಾನ್ಯರು ಮತ್ತು ಮಾನವೀಯ ಮೌಲ್ಯಗಳು ಇಷ್ಟೊಂದು ಕೆಳ ಹಂತಕ್ಕೆ ಇಳಿದಿದೆಯೇ, ಇಡೀ ವ್ಯವಸ್ಥೆ ದುರ್ಬಲವಾಗಿದೆಯೇ, ಅಸಹಾಯಕವಾಗಿದೆಯೇ. ಈ ಸಂಶಯ ನಮ್ಮನ್ನು ಕಾಡುತ್ತಿಲ್ಲವೇ..

ಚಿಕ್ಕ ಮಕ್ಕಳನ್ನು ಅತ್ಯಾಚಾರ ಮಾಡಿ, ಪೋಲೀಸರಿಂದ ಬಂಧನಕ್ಕೊಳಗಾಗಿ, ಜೈಲಿಗೆ ಹೋಗಿ, ಕೇಲವೇ ತಿಂಗಳುಗಳಲ್ಲಿ ಅಲ್ಲಿಂದ ಹೊರಬಂದು ಮತ್ತೆ ಅದೇ ಸ್ಥಾನ ಗೌರವ ಪಡೆಯುವ ಸಮಾಜದಲ್ಲಿ ನಾವು ಬದುಕುವುದಾದರು ಹೇಗೆ, ಯಾರನ್ನು ನಂಬಿ ನಾವು ನೆಮ್ಮದಿಯಾಗಿರುವುದು, ಈ ಘಟನೆ ಈಗಾಗಲೇ ಹುಟ್ಟಾ ಕ್ರಿಮಿನಲ್ ಆಗಿರುವ ವ್ಯಕ್ತಿಗಳಿಗೆ ಪ್ರೋತ್ಸಾಹ ನೀಡಿದಂತಾಗಲಿಲ್ಲವೇ, ಕೊಲೆ ಅತ್ಯಾಚಾರಿಗಳಿಗೆ ಬಿಡುಗಡೆ ಭಾಗ್ಯ ಸಿಗುವಂತಾಗಲಿಲ್ಲವೇ. ಅಷ್ಟು ದೊಡ್ಡ ಆರೋಪಿಯೇ ಮತ್ತೆ ಸಮಾಜದಲ್ಲಿ ತಲೆ ಎತ್ತಿ ನಡೆಯುವಾಗ ಕಳ್ಳ, ವಂಚಕ, ಭ್ರಷ್ಟರು ಇದನ್ನು ಗಮನಿಸದೇ ಇರುತ್ತಾರೆಯೇ..

ಇನ್ನು ಮೂರನೆಯ ಅಧ್ಯಾಯ..

ನೇರವಾಗಿ ನಮಗೆ ಮತ್ತು ನಮ್ಮ ಆತ್ಮಸಾಕ್ಷಿಗೆ ಸಂಬಂಧಿಸಿದ್ದು. ಈ ಅಧ್ಯಾಯದಲ್ಲಿ ಆ ಮಠಾಧೀಶರ ಪಾತ್ರ ಇರುವುದಿಲ್ಲ. ಏಕೆಂದರೆ ಒಬ್ಬ ವ್ಯಕ್ತಿ ಈ ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದು ಆತನ ಸ್ವತಂತ್ರ ನಿರ್ಧಾರ. ಒಬ್ಬ ಸ್ವಾಮೀಜಿಯಾಗಿ ನನ್ನ ನಡವಳಿಕೆ ಹೇಗಿರಬೇಕು ಎಂಬುದು ಅವರೇ ನಿರ್ಧರಿಸುತ್ತಾರೆ. ಅದರ ಪರಿಣಾಮ ಫಲಿತಾಂಶ, ಒಳಿತು ಕೆಡಕು ಅವರೇ ಅನುಭವಿಸುತ್ತಾರೆ. ಆದರೆ ಈ ಸಮಾಜಕ್ಕೆ ಮತ್ತು ಇಲ್ಲಿನ ವ್ಯವಸ್ಥೆಗೆ ಏನಾಗಿದೆ. ವ್ಯವಸ್ಥೆ ವ್ಯಕ್ತಿಯಂತೆ ಸ್ವತಂತ್ರ ತೀರ್ಮಾನ ಕೈಗೊಳ್ಳುವುದಿಲ್ಲ. ಅದು ಒಂದು ಕ್ರಮಬದ್ಧ ನೀತಿ ನಿಯಮಗಳ ಧರ್ಮ ಮತ್ತು ಕಾನೂನು ಹೊಂದಿದೆ. ಸಾರ್ವಜನಿಕವಾಗಿ ವ್ಯಕ್ತಿಗಳು ಅದಕ್ಕೆ ಬದ್ದರಾಗಿಯೇ ನಡೆಯಬೇಕು. ಮನುಷ್ಯನ ಘನತೆಯನ್ನು ಕಾಪಾಡಿ ಸಮಾಜವನ್ನು ಕ್ರಮಬದ್ಧವಾಗಿ ಶತಶತಮಾನಗಳ ಕಾಲ ಮುನ್ನಡೆಸಲು ರೂಪಿಸಿಕೊಂಡ ನಿಯಮಗಳಿವು. ಸದ್ಯ ಸಂವಿಧಾನ ನಮ್ಮ ಅಂತಿಮ ನ್ಯಾಯಾಲಯ. ಅದು ಸಹ ಯಾವ ಕಾರಣದಿಂದಲೇ ಆಗಿರಲಿ ಈ ರೀತಿ ವಿವೇಚನೆ ಇಲ್ಲದೆ ಕೇವಲ ವಕೀಲಿಕೆಯ ಕಾರಣ ಆರೋಪಿ ಕೆಲವೇ ಸಮಯದಲ್ಲಿ ನಿರಾಳವಾಗುವುದು, ಜನ ಅವರನ್ನು ಮತ್ತೆ ವಿಜೃಂಭಿಸುವುದು ಭವಿಷ್ಯದ ದೃಷ್ಟಿಯಿಂದ ಎಷ್ಟು ಸರಿ. ಹೌದು ಕಾನೂನಿನ ಪ್ರಕಾರ ಎಲ್ಲವೂ ಸರಿ ಇರಬಹುದು. ಇತರೆ ಪ್ರಕರಣಗಳಲ್ಲಿ ಇದನ್ನು ಗುರಾಣಿಯಾಗಿ ಬಳಸಬಹುದು, ವಾದ ಮಾಡುವ ಮೂಲಕ ಎಲ್ಲವನ್ನೂ ಸಮರ್ಥಿಸಬಹುದು ಆದರೆ ನಮ್ಮೆಲ್ಲರ ಆತ್ಮಸಾಕ್ಷಿಗೆ ಏನೆಂದು ಉತ್ತರಿಸುವುದು. ಆ ಅತ್ಯಾಚಾರಕ್ಕೆ ಒಳಗಾದ ಮಕ್ಕಳಿಗೆ ಹೇಗೆ ಸಮಾಧಾನ ಮಾಡುವುದು. ಈ ವ್ಯವಸ್ಥೆ ಇರುವುದೇ ಹೀಗೆ ಎಂದು ಹೇಳೋಣವೇ..

ನಾಲ್ಕನೇ ಅಧ್ಯಾಯದಲ್ಲಿ..

ಒಂದು ವೇಳೆ ಆ ವ್ಯಕ್ತಿ ನಿರಪರಾಧಿಯೇ ಆಗಿದ್ದರೆ ಇಡೀ ವ್ಯವಸ್ಥೆ ಎಷ್ಟೊಂದು ಕಠೋರವಾಗಿ ಒಬ್ಬ ವ್ಯಕ್ತಿಯನ್ನು ಬಿಂಬಿಸಿದೆ ಎಂದು ಭಾವಿಸಿ ತಲೆ ತಗ್ಗಿಸಬೇಕಲ್ಲವೇ. ಆ ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಅಷ್ಟು ದೊಡ್ಡ ಸುಳ್ಳು ಹೇಳುವ ಮಟ್ಟಕ್ಕೆ



ಬೆಳೆದರೆ ಅಥವಾ ಅವರನ್ನು ಯಾರೋ ದುಷ್ಟರು ದುರುಪಯೋಗ ಪಡಿಸಿಕೊಂಡರೆ. ಯಾವುದೇ ನಿಜವಾದರೂ ವ್ಯವಸ್ಥೆ ಸರಿ ಇಲ್ಲ ಎಂದೇ ಹೇಳಬೇಕಾಗುತ್ತದೆ..

ಅಂತಿಮವಾಗಿ ಐದನೆಯ ಅಧ್ಯಾಯದಲ್ಲಿ..

ಸ್ವಾಮೀಜಿಗಳಿಗೊಂದು ಕಿವಿ ಮಾತು..

ಮಾನ್ಯ ಗೌರವಾನ್ವಿತ ಪೂಜ್ಯ ಸ್ವಾಮೀಜಿಯವರೇ, ಸುಮಾರು 65 ವರ್ಷ ವಯಸ್ಸಿನ ನಿಮಗೆ ಈ ನೆಲ ಸಾಕಷ್ಟು ಕೊಟ್ಟಿದೆ. ನೀವು ಒಂದು ಸಣ್ಣ ಸಾಮ್ರಾಜ್ಯವನ್ನು ಬಹಳ ವರ್ಷಗಳ



ಕಾಲ ಆಳಿದ್ದೀರಿ. ನಿಮ್ಮ ಆಡಳಿತ ಸಮಯದಲ್ಲಿ ನಿಜಕ್ಕೂ ಅನೇಕ ಒಳ್ಳೆಯ ಮಾನವೀಯ ಕೆಲಸಗಳನ್ನು ಮಾಡಿದ್ದೀರಿ. ಸಮ ಸಮಾಜದ ನಿರ್ಮಾಣಕ್ಕಾಗಿ ಸ್ವಲ್ಪ ಮಟ್ಟಿಗೆ ಶ್ರಮಿಸಿದ್ದೀರಿ. ಏನೋ ವೈಯಕ್ತಿಕ ಕಾಮನೆಗಳನ್ನು ನಿಯಂತ್ರಿಸಲು ಸಾಧ್ಯವಾಗದೆ ವಿಕೃತ ಮೆರೆದು ಸಿಕ್ಕಿ ಹಾಕಿಕೊಂಡಿದ್ದೀರಿ. ಬಹುತೇಕ ಎಲ್ಲವೂ ಬಟಾಬಯಲಾಗಿದೆ..

ನೀವು ಸುಖದ ಸುಪ್ಪತ್ತಿಗೆಯನ್ನು ನೋಡಿದ್ದೀರಿ. ಜೈಲುವಾಸವನ್ನು ಅನುಭವಿಸಿದ್ದೀರಿ. ಇನ್ನು ಸಾಕು. ಒಮ್ಮೆ ಏಕಾಂತದಲ್ಲಿ ನಿಮ್ಮ ಆತ್ಮದೊಳಗೆ ಪ್ರವೇಶಿಸಿ. ಆಧ್ಯಾತ್ಮ ಚಿಂತಕರಾದ ನಿಮಗೆ ಅದು ಅಸಾಧ್ಯವೇನಲ್ಲ. ಒಂದು ವೇಳೆ ನೀವು ಘಟನೆಯಲ್ಲಿ ಭಾಗಿಯಾಗಿದ್ದರೆ ಕಾನೂನಿನ ಬಲೆಯೊಳಗೆ ಸಿಗದಂತೆ ವಿಷಾಧ ವ್ಯಕ್ತಪಡಿಸಿ ಅಥವಾ ನೀವು ನಿರಪರಾಧಿಯಾಗಿದ್ದರೆ ಯಾರು ಒಪ್ಪಲಿ ಬಿಡಲಿ ನೀವು ಮನಸ್ಸಿನ ಮಾತನ್ನು ಹೇಳಿ ವಾನಪ್ರಸ್ಥಾಶ್ರಮದಿಂದ ದಯವಿಟ್ಟು ಅಂತಿಮ ಸನ್ಯಾಸಾಶ್ರಮಕ್ಕೆ ತೆರಳಿ ಈ ಸಮಾಜಕ್ಕೆ ಒಂದು ತೆರೆದ ಮನಸ್ಸಿನ ತ್ಯಾಗದ ಸಂದೇಶ ನೀಡಿ..

ಈ ಸಮಾಜದಲ್ಲಿ ಸವಾಲು ಎಸೆದು ಗೆದ್ದವರು, ಫೀನಿಕ್ಸ್ ನಂತೆ ಬೂದಿಯಿಂದ ಎದ್ದು ಬಂದವರು, ಸೇಡು ತೀರಿಸಿಕೊಂಡವರು, ಹಿಯಾಳಿಸಿದವರ ಮುಂದೆ ಎದ್ದು ನಿಂತವರು ಸಾಕಷ್ಟು ಮಂದಿ ಇದ್ದಾರೆ. ಆದರೆ ಆತ್ಮಸಾಕ್ಷಿಯ ಕರೆಗೆ ಓಗೊಟ್ಟು ತ್ಯಾಗ ಮಾಡಿದ ಮಹಾಪುರುಷರು ಅತ್ಯಂತ ವಿರಳ. ಆ ಕೆಲಸವನ್ನು ನೀವು ಮಾಡಿದರೆ ಖಾವಿ ತೊಟ್ಟ ಸರ್ವಸಂಗ ಪರಿತ್ಯಾಗದ ಸಂಕೇತಕ್ಕೆ ಒಂದು ಅರ್ಥ ಬರುತ್ತದೆ ಮತ್ತು ನೀವು ಅದಕ್ಕೆ ಒಂದು ಮಾದರಿಯಾಗುವಿರಿ. ಆಯ್ಕೆ ನಿಮ್ಮ ವಿವೇಚನೆಗೆ ಬಿಟ್ಟದ್ದು..

ಹಾಗೆಯೇ ಈ ಸ್ವಾಮೀಜಿಗೆ ಪಾದಪೂಜೆ ಮಾಡುವ ಅಥವಾ ಅವರನ್ನು ತಿರಸ್ಕರಿಸುವ ವಿವೇಚನೆ ಜನರಿಗೆ ಬಿಟ್ಟದ್ದು..

ಒಟ್ಟಿನಲ್ಲಿ ಮುಂದಿನ ನಮ್ಮ ಮಕ್ಕಳಿಗೆ ಇದರಿಂದ ಒಂದು ಸಂದೇಶ ರವಾನೆಯಾಗುತ್ತದೆ. ಅದು ಹೇಗಿರಬೇಕು ಎಂಬ ಆಯ್ಕೆ ನಮ್ಮೆಲ್ಲರಿಗೆ ಸೇರಿದ್ದು.

ದಯವಿಟ್ಟು ಯೋಚಿಸಿ ನಿರ್ಧರಿಸಿ..

# ತಾಲೂಕು ಅಧ್ಯಕ್ಷರಾಗಿ ಹಿರೇಕುರುಬರ



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ರಾಷ್ಟ್ರೀಯ ಸಮಾಜ ಪಕ್ಷದ ತಾಲೂಕು ಅಧ್ಯಕ್ಷರನ್ನಾಗಿ ತಾಲೂಕಿನ ಕೇಸಾಪೂರ ಗ್ರಾಮದ ನಾಗರಾಜ ಹಿರೇಕುರುಬರ ಅವರನ್ನ ಆಯ್ಕೆ ಮಾಡಲಾಗಿದೆ.

ಪಕ್ಷದ ಸಂಸ್ಥಾಪಕ ಅಧ್ಯಕ್ಷ ಮಹಾದೇವ ಜಾನಕರ ಅವರ ಮೌಖಿಕ ಆದೇಶದನ್ವಯ ಈ ಆದೇಶ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷ ಧರ್ಮಣ್ಣ ತೊಂಟಾಪೂರ ತಿಳಿಸಿದ್ದಾರೆ.

# ಬಸವ ಪುರಾಣ ಉದ್ಘಾಟನೆ ಇಂದು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ವಿಬಿಸಿ ಹೈಸ್ಕೂಲ ಮೈದಾನದ ಸಿದ್ದೇಶ್ವರ ವೇದಿಕೆಯಲ್ಲಿ ಹಮ್ಮಿಕೊಳ್ಳಲಾದ ಬಸವ ಪುರಾಣ ಕಾರ್ಯಕ್ರಮದ ಉದ್ಘಾಟನೆ ಡಿ.10 ರಂದು ಸಂಜೆ 5:30 ಕ್ಕೆ ಜರುಗಲಿದೆ.

ಕುಂಟೋಜಿ ಸಂಸ್ಥಾನ ಹಿರೇಮಠದ ಡಾ.ಚನ್ನವೀರ ದೇವರು ದಿವ್ಯಸಾನಿಧ್ಯ ವಹಿಸಲಿದ್ದು, ಉದ್ಘಾಟಕರಾಗಿ ಶಾಸಕ ಸಿ.ಎಸ್.ನಾಡಗೌಡ ಅಪ್ಪಾಜಿ ಮುಖ್ಯ ಅತಿಥಿಗಳಾಗಿ ವೀರಶೈವ ವಿದ್ಯಾ ವರ್ಧಕ ಸಂಘದ ಕಾರ್ಯಾಧ್ಯಕ್ಷ ಬಿ.ಸಿ.ಮೋಟಗಿ, ಸಮಾಜ ಸೇವಕ ಮಲ್ಲಿಕಾರ್ಜುನ ಮದರಿ, ಉದ್ದಿಮೆದಾರ ಶಂಕರಗೌಡ ಹಿರೇಗೌಡರ, ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ.ಅಸ್ಕಿ, ಗುತ್ತಿಗೆದಾರ ಶಾಂತಗೌಡ ಪಾಟೀಲ ನಡಹಳ್ಳಿ, ಬಸವ ಪುರಾಣ ಸಮಿತಿಯ ಗೌರವಾಧ್ಯಕ್ಷ ಎಂ.ಬಿ.ನಾವದಗಿ, ಕಾರ್ಯಾಧ್ಯಕ್ಷ ಪ್ರಭುಗೌಡ ದೇಸಾಯಿ, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಪ್ರಭುರಸಜ ಕಲ್ಬುರ್ಗಿ ಆಗಮಿಸಲಿದ್ದಾರೆ.

ತಾಳಿಕೋಟಿ ತಾಲೂಕಿನ ಆಸ್ಕಿ, ಬೆಕಿನಾಳ, ಬೂದಿಹಾಳ ಹಾಗೂ ಹುಣಶ್ಯಾಳ ಕೆರೆಗಳು । ಜಿಲ್ಲಾಧಿಕಾರಿಗೆ ಮನವಿ

# ಕೆರೆಗೆ ನೀರು ತುಂಬಿಸಲು ರೈತ ಸಂಘ ಆಗ್ರಹ

**ಉದಯರಶ್ಮಿ ನ್ಯೂಸ್**ವಿಜಯಪುರ: ಜಿಲ್ಲೆಯ ತಾಳಿಕೋಟಿ ತಾಲೂಕಿನ ಆಸ್ಕಿ, ಬೆಕಿನಾಳ, ಬೂದಿಹಾಳ ಹಾಗೂ ಹುಣಶ್ಯಾಳ ಕೆರೆಗೆ ನೀರು ತುಂಬಿಸುವಂತೆ ಆಗ್ರಹಿಸಿ ವಿಜಯಪುರ ಜಿಲ್ಲಾಧಿಕಾರಿ ಟಿ.ಬೂಬಾಲನ್ ಅವ–ರಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಮನವಿ ಸಲ್ಲಿಸಲಾಯಿತು.

ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡಿ, ಈ ವರ್ಷ ಒಟ್ಟಾರೆ ಮಳೆ ಬಾರದಿರುವುದರಿಂದ ಬರಲಿರುವ ಬೇಸಿಗೆ ಸಮಯದಲ್ಲಿ ರೈತರಿಗೆ, ಜನಜಾನುವಾರುಗಳಿಗೆ ಕುಡಿಯಲು ನೀರು ಇಲ್ಲದೇ ಸಮಸ್ಯೆ ಇಡಾಗಬೇಕಾಗುತ್ತದೆ, ಕೂಡಲೆ ಅಧಿಕಾರಿಗಳ ಜೊತೆ ಚರ್ಚಿಸಿ ಈ 4 ಕೆರೆಗಳನ್ನು ತುಂಬಬೇಕು ಎಂದು ಮನವಿ ಸಲ್ಲಿಸಿ ಆಗ್ರಹಿಸಿದರು.

ಮುಳವಾಡ ಏತನೀರಾವರಿ, ಬೂದಿಹಾಳ–ಪೀರಾಪುರ, ಏತನೀರಾವರಿ ಯೋಜನೆಗಳು ರೈತರಿಗೆ ಅನುಕೂಲವಾಗುವ ಯೋಚನೆಯನ್ನಿಟ್ಟುಕೊಂಡು ಸರಕಾರದ ಕೋಟ್ಯಾಂತರ ರೂಪಾಯಿ ಹಣ ವ್ಯಯ ಮಾಡಿ ಪ್ರಾರಂಭ ಮಾಡಿರುವ ಯೋಜನೆಗಳು ಇನ್ನು ಮುಗಿದಿಲ್ಲ, ಕಳಪೆ ಮಟ್ಟದ ಕಾಮಗಾರಿ



ನಡೆಯುತ್ತಿದ್ದರು ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತ್ತಿದ್ದಾರೆ, ಆದ್ದರಿಂದ ತಾವುಗಳು ಕುದ್ದಾಗಿ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಸರಕಾರಕ್ಕೆ ಹಾಗೂ ರೈತರಿಗೆ ಆಗುತ್ತಿರುವ ನಷ್ಟವನ್ನು ತಡೆಯಬೇಕು, ಅದೇರೀತಿ ರೈತರಿಗೆ ಈ ನೀರಾವರಿ ಯೋಜನೆಗಳು ವರಧಾನವಾಗುವಂತೆ ಮಾಡಬೇಕು ಎಂದರು.

ಆಸ್ಕಿ–ಕಲಕೇರಿ, ಕಲಕೇರಿ–ತಾಳಿಕೋಟಿ ವರೆಗಿನ ಡಾಂಬರ ರಸ್ತೆ ಭೂಮಿ ಪೂಜೆ ಆಗಿ ವರ್ಷಗಳೆ ಕಳೆದರೂ ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲ, ಕೂಡಲೆ ಗುಣಮಟ್ಟಾದ ರಸ್ತೆ ಮುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಬೇಕೆಂದು ಮನವಿ ಮಾಡಿದರು

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಳಿಕೋಟಿ ಅಧ್ಯಕ್ಷ ಶ್ರೀಶೈಲ ವಾಲಿಕಾರ, ಕಲಕೇರಿ ಹೋಬಳಿ ಅಧ್ಯಕ್ಷರಾದ ಮಹಿಬೂಬ ಬಾಷಾ ಮನಗೂಳಿ, ಅಖಂಡ ಕರ್ನಾಟಕ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಸೇರಿದಂತೆ ಅನೇಕ ರೈತ ಮುಖಂಡರು ಉಪಸ್ಥಿತ–ರಿದ್ದರು.

# ಭಗವದ್ಗೀತೆ ಸುಳ್ಳು ರಹಿತವಾಗಿದೆ :ವಿಜಯಲಕ್ಷ್ಮೀ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಕರ್ಮದಲ್ಲಿ ಸಾವು ಸಹಿತವಾಗಿದೆ. ಭಗವದ್ಗೀತೆ ಸುಳ್ಳು ರಹಿತವಾಗಿದೆ ಎಂದು ಶಿಕ್ಷಣ ಸಂಯೋಜಕಿ ವಿಜಯಲಕ್ಷ್ಮೀ ಚಿಲ್ಲಾಳಶೆಟ್ಟಿ ಹೇಳಿದರು.



ಪಟ್ಟಣದ ಜ್ಞಾನ ಭಾರತಿ ವಿದ್ಯಾ ಮಂದಿರದಲ್ಲಿ ನಡೆದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಯತಿವರೇಣ್ಯರಾದ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಆಯೋಜಿಸಿರುವ ಭಗವದ್ಗೀತಾ ಅಭಿಯಾನ–ಕರ್ನಾಟಕ–2023ರ ತಾಲೂಕು ಮಟ್ಟದ ಸಪ್ತಾಹದ 2ನೇ ದಿನದ ಗೀತಾರಾಧನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೀವನದ ಪ್ರತಿಯೊಂದು ಸುಖ–ದು:ಖಗಳಿಗೆ ಗೀತೆಯಲ್ಲಿ ಉತ್ತರವಿದೆ. ಕಲೆ ಮತ್ತು ವಿಜ್ಞಾನ ಸದಶ್ಯವಾದ ಅಂಶಗಳು ಅಡಕವಾಗಿದೆ. ಪ್ರತಿಯೊಂದು ಗೀತೆಯಲ್ಲಿನ ಅಂಶಗಳನ್ನು ಅನ್ವಯಮಾಡಿಕೊಳ್ಳುತ್ತಾ ಸಾರ್ಥಕ್ಯ ಕಾಣಬೇಕಾಗಿದೆ. ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಮಾಡಬಾರದನ್ನು ಮಾಡುವ, ನೋಡಬಾರದನ್ನು ನೋಡುವ ಕಾರ್ಯಕ್ಕೆ ಮುಂದಾಗಿ ಸಮಾಜಕ್ಕೆ ಕಂಟಕರಾಗುತ್ತಿದ್ದಾರೆ. ಮನೆಯ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ಧರ್ಮಮಾರ್ಗದ ಸುವಾಸನೆ ಪಸರಿಸುತ್ತ ಇರಬೇಕು. ಮೊದಲು ಪಾಲಕರು ಸಂಸ್ಕಾರವನ್ನು ಹೊಂದಿ ಮಕ್ಕಳಿಗೆ ಸಂಸ್ಕಾರ ಉಣಬಡಿಸಬೇಕು. ನಾವು ಮನರಂಜನೆ ಚಟುವಟಿಕೆ, ಸಮಾಜ ವ್ಯವಸ್ಥೆ, ಪ್ರತಿಯೊಂದು ಕಡೆಯಲ್ಲಿ ಕಾಣುವ ಒಳ್ಳೆಯ ಅಂಶಗಳನ್ನು ಮಾತ್ರವೇ ತೆಗೆದುಕೊಳ್ಳಬೇಕು ಎಂದರು.

ಪುರಸಭೆ ನಾಮನಿರ್ದೇಶಕ ಸದಸ್ಯರಾದ ರಾಜಶೇಖರ ಹೊಳಿ ಮಾತನಾಡಿ, ಗೀತಾ ಅಭಿಯಾನ ಬಹಳ ಮಹತ್ವದ್ದು. ಭಗವದ್ಗೀತೆ ಓದುವುದು ಎಂದರೆ ಕೃಷ್ಣ ಪರಮಾತ್ಮನೊಂದಿಗೆ ನೇರವಾಗಿ ಮಾತನಾಡಿದಂತೆ. ನಮ್ಮ ಪರಂಪರೆಯನ್ನು ನಾವು ಮನೆಯಿಂದ ಹಿಡಿದು ಸಮಾಜಕ್ಕೆ ತಲುಪಿಸುವ ವ್ಯವಸ್ಥೆ ಮಾಡಬೇಕಾಗಿದೆ ಎಂದರು.

ನಿವೃತ್ತ ಮುಖ್ಯ ಗುರುಮಾತೆ ಶಾಂತಾ ಭಟ್ಟ ದೀಪ ಪೂಜನೀಯ ಕಾರ್ಯಕ್ರಮದ ಹಿನ್ನೆಲೆಯನ್ನು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಬಿ.ಪಿ.ಕುಲಕರ್ಣಿ ಅಧ್ಯಕ್ಷೀಯ ನುಡಿಗಳನ್ನಾಡಿದರು.

ಈ ವೇಳೆ ಉಪಾಧ್ಯಕ್ಷ ಡಾ.ಎಸ್.ಬಿ.ವಡವಡಗಿ, ಸದಸ್ಯರುಗಳಾದ ಲೀಲಾ ಭಟ್ಟ, ಬಸವರಾಜ ನಾಲತವಾಡ, ಅನಿಲ ತೇಲಂಗಿ, ಮಹಾದೇವಿ ಕಂಠಿ, ಅರುಣ ಹುನಗುಂದ, ಜಿ.ಜೆ.ಪಾದಗಟ್ಟಿ, ಅಕ್ಕಮಹಾದೇವಿ ಪೊಲೇಶಿ, ರೇಖಾ ಕಾಳೆ, ಅನಿತಾ ಕರಣಿ, ಪಿಂಟು ರಾಠೋಡ್, ಬಸನಗೌಡ ಪಾಟೀಲ್, ಶಾರದಾ ಗಸ್ತಿಗಾರ, ರಶ್ಮಿ ತೆಲಂಗಿ ಸೇರಿದಂತೆ ಇತರರು ಇದ್ದರು.

ಶಿಕ್ಷಕಿ ಶಾಹೀನ ನಾಲತವಾಡ ಮತ್ತು ಗುರುಬಾಯಿ ತಂಗಡಗಿ ಸೇರಿ ಮಹತ್ವದ ಪೋಟೊಗಳನ್ನು ಶಾಲೆಗೆ ಸಮರ್ಪಿಸಿದರು.

ಶಾಲಾ ಮಾತೆಯುರು ದೀಪಾರಾಧನೆ ನೆರವೇರಿಸಿದರು. ಗುರುಮಾತೆ ರಂಜಿತಾ ಹೆಗಡೆ ವಿದ್ಯಾರ್ಥಿಗಳೊಂದಿಗೆ ಪ್ರಾರ್ಥಿಸಿದರು.

ಪ್ರಾಸ್ತಾವಿಕದೊಂದಿಗೆ ಸಂಚಾಲಕ ರಾಮಚಂದ್ರ ಹೆಗಡೆ ಸ್ವಾಗತಿಸಿದರು. ಸರಸ್ವತಿ ಮಡಿವಾಳರ್ ನಿರೂಪಿಸಿದರು. ಅನ್ನಪೂರ್ಣ ನಾಗರಾಳ ವಂದಿಸಿದರು.

# ವಕೀಲರ ಹತ್ಯೆ ಖಂಡಿಸಿ ವಕೀಲರ ಸಂಘದ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ವಕೀಲರಿಗೆ ರಕ್ಷಣೆಯೇ ಇಲ್ಲದಂತಾಗಿದೆ. ಕಳೆದ ವಾರ ಚಿಕ್ಕಮಗಳೂರು ಪೊಲೀಸರು ವಕೀಲರ ಮೇಲೆ ಹಲ್ಲೆ ಮಾಡಿದ್ದರು. ಇದೀಗ ಕಲಬುರಗಿಯಲ್ಲಿ ವಕೀಲರೊಬ್ಬರ ಕೊಲೆಯಾಗಿದೆ. ಸರ್ಕಾರ ವಕೀಲರ ರಕ್ಷಣೆಗೆ ನಿಲ್ಲಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಎಸ್.ಬಿ. ದೊಡಮನಿ ಒತ್ತಾಯಿಸಿದರು.



ತಾಲೂಕು ಆಡಳಿತ ಸೌಧಕ್ಕೆ ಹೋಗಿ ಮನವಿ ಸಲ್ಲಿಸುವ ಮೊದಲು ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಹತ್ಯೆಗೈದವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು. ಬಳಿಕ ತಾಲೂಕು ಆಡಳಿತ ಸೌಧದವರೆಗೆ ಬೈಕ್ ರ್ಯಾಲಿ ಮೂಲಕ ಪ್ರತಿಭಟನೆ ನಡೆಸಿದರು.

ಈ ವೇಳೆ ವಕೀಲರಾದ ಅರವಿಂದ ಕನ್ನೂರ, ಆರ್.ಡಿ.ಅಮ್ಯಾಗೋಳ, ಜಿ.ಜಿ.ಮಾರ್ಸನಳ್ಳಿ, ಎಸ್.ಎ. ಗಾಯಕವಾಡ, ಆರ್. ಎಂ.ಶಿರಬೂರ, ಎಂ.ಸಿ. ಯಾತನೂರ, ಎಸ್.ಬಿ. ಖಾನಾಪೂರ, ಎಸ್.ಎಮ್.ಕಾಚೂರ, ಶಶಿಧರ ಗಾಯಕವಾಡ ಸೇರಿದಂತೆ ತಾಲೂಕಿನ ಎಲ್ಲ ವಕೀಲರು ಇದ್ದರು.

# ಸ್ವಗತ

ನನಗೆ ಕೂಗಲು ಆಗುತ್ತಿಲ್ಲ... ಗಂಟಲಿಗೆ ಏನಾಯಿತೋ ಗೊತ್ತಿಲ್ಲ... ಕೂಗಲು ಎಷ್ಟು ಟ್ರೈ ಮಾಡಿದೆ.. ಆದರೆ ಆಗಲ್ಲ... ಕಣ್ಣಲ್ಲಿ ದಳ ದಳ ಎಂದು ನೀರು ಧುಮುಕಿತು. ಎಲ್ಲಿಂದಲೋ ಬಂದ ಅಮ್ಮ.. ಅಳಬೇಡ ಪುಟ್ಟಾ...ಏನಾಗಿಲ್ಲ ನಿನಗೆ ಈಗ ಡಾಕ್ಟರ್ ಬರುತ್ತಾರೆ... ನೋಡಿ ಔಷಧ ಕೊಡುತ್ತಾರೆ ಎಂದು ಮುದ್ದು ಮಾಡಿದರು..ಸ್ವಲ್ಪ ಸಮಾಧಾನವಾಗಿ ಅಲ್ಲೇ ಮಂಪರು ಬಂತು.

ತುಂಬಾ ದಿನದಿಂದ ನನಗೆ ಏನಾದರೂ ಒಂದು ಪ್ರಾಬ್ಲಮ್.. ಅಮ್ಮ ಮೀಟಿಂಗ್ ನಲ್ಲಿ ಇದ್ದಾಗ ನನಗೆ ಸೂಸು ಬಂದು ಎಲ್ಲಂದರಲ್ಲಿ ಸೂಸು ಮಾಡಿ ಅಮ್ಮನಿಗೆ ಕಷ್ಟ ಕೊಡುವುದು... ಅಮ್ಮ ಪಾಪ ಎಲ್ಲಾ ಕ್ಲೀನ್ ಮಾಡಿ ಸುಸ್ತು ಆಗುತ್ತಾಳೆ. ಈ ಕಾಯಿಲೆಯಿಂದ ಕಣ್ಣು ಬೇರೆ ಕಾಣಿಸಲ್ಲ... ಅದರಿಂದ ಇನ್ನೂ ಕಷ್ಟ ನನಗೆ...

ಅಪ್ಪ.. ಅಮ್ಮ ಇಬ್ಬರೂ ನನ್ನ ಕೈ ಹಿಡಿದು ಫಸ್ಟ್ ಫ್ಲೋರ್ ಗೆ ಕರೆದುಕೊಂಡು ಹೋಗುತ್ತಾರೆ.. ಮೊನ್ನೆ ಅಪ್ಪ ಒಂದು... ಎರಡು ಎಂದು ನನ್ನನ್ನು ಒಂದನೇ ಮಹಡಿ ಮೆಟ್ಟಿಲಿನಿಂದ ಕೆಳಗೆ ಕರೆದುಕೊಂಡು ಬರುತ್ತಿದ್ದರು. ನಾನು ಅವರ ಕಡೆ ನೋಡುತ್ತಾ ಬಿದ್ದು ಬಿಟ್ಟೆ... ಅಪ್ಪ ಕೊಡಲೇ ನೋವಾಯಿತಾ ಪುಟ್ಟಾ?





## ಭಾವರಶ್ಮಿ

– ವಿಜಯಲಕ್ಷ್ಮೀ ಮೂರ್ತಿ.
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಎಂದು ಕಾಲು ತಿಕ್ಕಿ ಸಮಾಧಾನ ಮಾಡಿದರು. ನಾನು ಅಪ್ಪನನ್ನು ಪ್ರೀತಿಯಿಂದ ನೋಡಿದೆ.

ಅಮ್ಮ ನನಗೆ ಅನ್ನ... ಮತ್ತೆ ಬಿಸಿ ಹಾಲು ಹಾಕಿ ಕಲಿಸಿ ಕೊಡುತ್ತಾಳೆ.... ಅದರ ಮೇಲೆ ಅಜ್ಜಿ ಮಾಡಿದ ಸಾಂಬಾರ್ ಹಾಕುತ್ತಾಳೆ.. ಅದೂ ಬೀಟ್ರೂಟ್ ಸಾಂಬಾರ್ ಅಂದರೆ ಬಹಳ ಇಷ್ಟ. ಬೇಕಂತ ಮೊಸರು ಹಾಗೂ ಬೀಟ್ರೂಟ್ ಹೋಳು ತಿಂದು ಅನ್ನ ಬಿಟ್ಟು ಬಿಡುವೆ...ಅಜ್ಜಿ..ಪಾಪ!ಅವನಿಗೆ ಕಣ್ಣು ಬೇರೆ ಕಾಣಿಸಲ್ಲ ಅಂತ ಮತ್ತೆ ಹಾಲು ಹಾಕಿ ಪ್ರೀತಿಯಿಂದ ತಿನ್ನಿಸುತ್ತಾರೆ.

ಶಾಲೆಗೆ ಹೋದ' ಅಕ್ಕಾ' ಬಂದರೆ ಇನ್ನೂ ಮಜ... ಅವಳು ನನಗೆ ಅಂತ ತಂದ ಬಿಸ್ಕತ್ ಕೊಟ್ಟು ಮುದ್ದು ಮಾಡುತ್ತಾಳೆ. ಅದರಲ್ಲೂ ಕ್ರೀಮ್ ಬಿಸ್ಕತ್ ನನಗೆ ಪ್ರಾಣ...ಮಳೆ ಬಂದರೆ ನನಗೆ ಚಳಿ... ಅಮ್ಮಾ ನನಗೆ ಡೈಪರ್ ಹಾಕಿ... ಬೆಡ್ ಶೀಟ್ ಹೊದಿಸಿ ಮಲಗಿಸುತ್ತಾಳೆ...

ಅಪ್ಪ... ಅಮ್ಮ ಎಷ್ಟು ಒಳ್ಳೆಯವರು... ನಾನು ಹುಷಾರಿಲ್ಲದೆ ಮಲಗಿದರೆ ಅವ–ರಿಗೆ ತಲೆ ಬಿಸಿ... ಭಾನುವಾರ ನನಗೆ ಅಪ್ಪ ಸ್ನಾನ ಮಾಡಿಸುತ್ತಾರೆ...ಶಾಂಪೂ ಹಾಕಿ ತಲೆ ತಿಕ್ಕಿ... ಮೈಗೆಲ್ಲಾ ಸೋಪ್ ಹಾಕುತ್ತಾರೆ... ಅದೇನು ಹೊಸ ಪರಿಮಳ... ಆಮೇಲೆ ಟವಲ್ ನಿಂದ ಮೈ ಒರಸಿ ಬೆಚ್ಚಗೆ ಮಾಡುತ್ತಾರೆ.... ನನಗೆ ಅಂತ ಮೂರು ಟರ್ಕಿ ಟವಲ್ ಇಟ್ಟಿದ್ದಾರೆ... ನಾನಂತೂ ಯಾವುದೋ ಲೋಕದಲ್ಲಿ ಇರುವ ಹಾಗೆ ಕನಸು ಕಾಣುತ್ತಾ ಅವರು ಕೊಟ್ಟ ಬೆಚ್ಚಗಿನ ಹಾಲು ಕುಡಿದು ಒಂದು ಒಳ್ಳೆ ನಿದ್ದೆ ಮಾಡುತ್ತೇನೆ...

ಆದರೆ ಈಗೀಗ ತುಂಬಾ ಸೋತು ಹೋಗಿದ್ದೇನೆ....ಅಮ್ಮ... ನನಗೆ ಡೈಪರ್ ಹಾಕಿ ಮಲಗಿಸುತ್ತಾಳೆ.... ಎದ್ದರೆ ಕಾಲಲ್ಲಿ ಶಕ್ತಿ ಇಲ್ಲ. ಮೊನ್ನೆ ಒಂದು ಸಣ್ಣ ಆಪರೇಷನ್ ಆಯಿತು.. ಕಾಲಿಗೆ ಗಾಯ ಆಗಿ ಅದು ತುಂಬಾ ತೊಂದರೆ ಕೊಡುತ್ತಿತ್ತು. ಡಾಕ್ಟರ್ ಶಾಪ್ ಗೆ ಕರೆದುಕೊಂಡು ಹೋಗಿದ್ದರು... ಅಮ್ಮ ಡ್ರೈವ್ ಮಾಡುತ್ತಿದ್ದರು.. ಅಪ್ಪ ಹಿಂದುಗಡೆ ನನ್ನನ್ನು ಕೂ–ರಿಸಿಕೊಂಡಿದ್ದರು... ಡಾಕ್ಟರ್ ನನಗೆ ಮಂಪರು ಬರುವ ಔಷಧಿ ಕೊಟ್ಟಿದ್ದರು.. ಕಾರಿನಲ್ಲಿ ಬರುವಾಗ ಎಚ್ಚರವಾಗಿ ಎಲ್ಲಾ ವಾಂತಿ... ಪಾಪ! ಅಪ್ಪನ ಪ್ಯಾಂಟ್... ಕಾರ್ ಶೀಟ್ ಎಲ್ಲಾ ಗಲೀಜು... ಆದ–'ರೆ ಅಪ್ಪ ಶಾಂತ ಮೂರ್ತಿ ಯಾಗಿ ಬೆನ್ನ ಮೇಲೆ ಕೈ ಆಡಿಸುತ್ತಿದ್ದರು. ಮನೆಗೆ ಬಂದ ನೆಂಟರು ಜಾಸ್ತಿ ದಿನ ಇರುವುದು ಡೌಟ್ ಅಂತ ಹೇಳಿದ್ದು ಕೇಳಿಸಿತು.. ನನ್ನ ಬಗ್ಗೆ ಅಂತ ನನಗೆ ಅಳು ಬಂತು. ಮುಖ ಸಪ್ಪೆ ಆಗಿದ್ದು ನೋಡಿ ನನ್ನ ಅಮ್ಮ ಲೂಟಿ.... ಸುಮ್ಮನೆ ಮುಖ ಕೆಳಗೆ ಹಾಕಿ ಬೇಸರ ಮಾಡಿಕೊಳ್ಳಬೇಡ ಎಂದು ಮುದ್ದು ಮಾಡಿದಾಗ ಖುಷಿಯಾಯಿತು...

ಅಮ್ಮನಿಗೆ ಸಿಟ್ಟು ಬಂದಾಗ ನನಗೆ ಬೈದರೂ ಮುದ್ದು ಮಾಡುವಾಗ ತುಂಟ... ಲೂಟಿ... ಪುಟ್ಟಾ.. ಎಂದು ಪ್ರೀತಿಯಿಂದ ಕರೆಯುವಾಗ... ಅಪ್ಪನ ತೊಡೆಯಲ್ಲಿ ಶಾಂತಿಯಿಂದ ಮಲಗುವಾಗ...ಅಕ್ಕನ ಕೈಯ ಮೇಲೆ ಮಲಗಿ ಮುದ್ದು ಮಾಡಿಸಿಕೊಳ್ಳುವಾಗ ...ಅಜ್ಜಿಯ ಕಾಲಿನ ಮಧ್ಯದಲ್ಲಿ ಕುಳಿತಾಗ.... ಅವರ ಸೀರೆ ಹಿಡಿದು ಆಟ ಆಡುವಾಗ... ಏನಾದರೂ ಆಗಿ ನಾನು ಸತ್ತು ಹೋದರೂ ಮುಂದಿನ ಜನ್ಮದಲ್ಲಿ ನಾನು ಮತ್ತೆ ಇವರ ಮಗನಾಗಿ ಹುಟ್ಟಬೇಕು... ಎಂದು ಅಮ್ಮನ ಮುಖ ನೋಡಿದೆ.


ಅಮ್ಮ ನನ್ನ ಕರೆದುಕೊಂಡು ಗೇಟ್ ದಾಟಿ ಹೊರಗೆ ಕರೆದುಕೊಂಡು ಹೋದಳು...ನಾನು ವಾಕಿಂ–ಗ್ ಅಂತ ನಾನು ಅಮ್ಮನ ಜೊತೆ ಧೈರ್ಯದಿಂದ ಹೋಗುತ್ತಿದ್ದೆ... ಬೀದಿಯಲ್ಲಿ ಇರುವ ನಾಯಿಗಳೆಲ್ಲಾ ನನ್ನ ಸ್ನೇಹಿತರು... ಅವರೆಲ್ಲ ನನ್ನ ಹತ್ತಿರ ಬಂದು ಬಾಲ ಅಲ್ಲಾಡಿಸುತ್ತಾ ಇದ್ದಾಗ ನಾನು ಮತ್ತಷ್ಟು ಜಂಬ ಮಾಡಿ ರಾಜನಾಗಿ ನಡೆಯುತ್ತಿದ್ದೆ... ಆದರೆ ಈಗ ನಾನು ಗೇಟ್ ತನಕ ಹೋಗಬೇಕಾದರೆ ಅಯ್ಯೋ!ಎಂದೇ ಅಮ್ಮನನ್ನು ಹಿಂಬಾಲಿಸುವೆ.

ಪಾಪದ ಅಮ್ಮ! ಸಿಂಬಾ... ನಿಧಾನವಾಗಿ ಬಾ... ಮೊದಲೇ ನಿನಗೆ ಸುಸ್ತು ಅಂತಾರೆ... ನಾನು ಸುಮ್ಮನೆ ಗೋಣು ಅಲ್ಲಾಡಿಸಿದೆ. ಹೇಗಿದ್ದರೂ ಬೌ ಬೌ ಅನ್ನುವುದಕ್ಕೆ ನನಗೆ ಶಕ್ತಿಯಿಲ್ಲ...ನನಗೂ ಹದಿಮೂರು ವರ್ಷ ತುಂಬುತ್ತೆ... ನಮ್ಮ ಆಯುಷ್ಯ ಅಷ್ಟೇ ಅಂತ ಎಲ್ಲರೂ ಹೇಳುತ್ತಾರೆ. ಆ ಭಗವಂತ ಯಾವಾಗ ಕರೆಯುತ್ತಾನೋ.

ಉದಯರಶ್ಮಿ ದಿನಪತ್ರಿಕೆ


## ಕಾವ್ಯರಶ್ಮಿ

ಒಡಪು : ಆಭರಣ



ಮೌನವೆಂಬ ಆಭರಣವ ಧರಿಸಿ
ನಾ ಮನೆಯೆಲ್ಲಾ ಓಡಾಡುತಿರೆ
ಭಾಸ್ಕರರಿಗೆ ಹಾಲು ಕುಡಿದಂತೆ
ಮೊಗವರಳುವುದು ಹೂವಂತೆ

– ಡಿ ಎನ್ ಅನಿತಾ



ನನ್ನವಳು ಕೇಳಿಲ್ಲ ಎಂದೂ ಆಭರಣ
ಒಡವೆಗಾಗಿ ನಡೆದಿಲ್ಲ ನಮ್ಮಲ್ಲಿ ಹಗರಣ
ನನ್ನ ತೋಳೆ ಎಂದೆಂದೂ ಕಂಠಾಭರಣ
ವಿಶ್ವಾಸ್ ಹೀಗೆ ಹೇಳ್ತಾರೆ ಪ್ರತಿಕ್ಷಣ

– ಜಯಶ್ರೀ ವಿಶ್ವಾಸ್



" ಅಹಂ " ನನ್ನ ಸತಿ ವನಿತಾಳಿಗಿರುವ ಆಭರಣ
ಬಿಂಕಗಾತಿಯಲ್ಲಿದೆ ಅದೇನೋ ಆಕರ್ಷಣೆ
ಗತ್ತಿನ ನಡೆ ನುಡಿಯೇ ಆವಳಿಗೆ ಭೂಷಣ
" ಆದರೂ " ಮಾಡುತ ವ್ರತ, ಓದುತ ಪುರಾಣ
ಆಶೀರ್ವಾದ ಪಡೆವಳು ಮುಟ್ಟಿ ನನ್ನ ಚರಣ.

– ರಾಜು ಗಾರೆಮನೆ




ರಮೇಶ್ ರವರ ಒಲುಮೆಯೇ ನನಗೆ ಆಭರಣ
ಅವರ ಮುಗುಳ್ನಗೆಯೇ ಹಿತವಾದ ಶಶಿಕಿರಣ
ಬಾಳಿನ ಸುಖ ಸಂಸಾರಕ್ಕೆ ಮಡದಿಯೇ ಕಾರಣ
ಎಂಬ ಅವರ ಒಲವ ಮಾತೆನಗೆ ಸಿಹಿ ಹೂರಣ

–ರಶ್ಮಿ ಬಿ.ವಿ.



ನಗುವೇ ಆಭರಣವು ನಿನಗೆ
ರಗಳೆ ಮಾಡದಿರು ಚೆಲುವೆ ಹೀಗೆ
ಹೊಗಳಿ ಸೆಳೆವರೆನ್ನ ಆಚಾರ್ರು
ಬಲು ಮೋಡಿ ಮಾತಿನ ಜಾಣರು

– ಶಕುಂತಲಾ ಪಿ ಆಚಾರ್, ಚಿತ್ರದುರ್ಗ



ಕೆಣಕುತ್ತಲೇ ಇರಬೇಕೆನ್ನುವ ಆಸೆ ವಿನಾಕಾರಣ
ಅವ ಕೊಡಿಸದಿದ್ದರೇನಂತೆ ಬಂಗಾರದ ಆಭರಣ..!
ತೊಡಿಸಿದರೆ ಸಾಕು ದಿನವೂ ನಗುತ ಒಲವಿನಲಿ
ತೋಳಬಂಧಿಯನು ನನ್ನ ಸುತ್ತ..ನನ್ನ ರಮಣ..!

–ಎಂ.ಹರಿಣಿ ಚಿನ್ನಿ ಮೋಹನಾ